ಸಂಚಿಕೆ ೧೨
ಡಿಸೆಂಬರ್ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್

ಸಂಚಿಕೆ ೧೨
ಡಿಸೆಂಬರ್ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...


| | | | |
|---|---|---|---|
| ಸಂಪಾದಕೀಯ | ಪುಟ ೧ | ಚಿಣ್ಣರ ಚಿತ್ತಾರ | ಪುಟ ೮ |
| ಹಬ್ಬ | ಪುಟ ೨ | ಕಥಾ ಸಂಕಲನ | ಪುಟ ೯ |
| ವ್ಯಕ್ತಿ ಪರಿಚಯ | ಪುಟ ೩ | ನಾ ಕಂಡ ಸಿನಿಮಾ | ಪುಟ ೧೦ |
| ರಾಮಾಯಣ | ಪುಟ ೪ | ಚಿತ್ರಕಲಾ ಲೋಕ | ಪುಟ ೧೧ |
| ಸಂದರ್ಶನ | ಪುಟ ೫ -೬ | ಪದ ಹುಡುಕೋಣ | ಪುಟ ೧೨ |
| ಪ್ರಾಣಿ ಪ್ರಪಂಚ | ಪುಟ ೭ | ಪತ್ರ ಮಾಲೆ ಮೂರ್ತಿ ತಾತ | ಪುಟ ೧೩-೧೪ |



ರಜನೀ


ಅಭಿಜ್ಞಾ


ಶ್ರೀನಿಧಿ


ಪ್ರಕೃತಿ


ಆರುಶ್

### ಸಂಪಾದಕೀಯ: ರಜನೀ ಮಹೇಶ್

ಹೂವು ಚೆಲುವೆಲ್ಲಾ ನಂದೆಂದಿತು ... ಹೆಣ್ಣು ಹೂವ ಮುಡಿದು ಚೆಲುವೆ ತಾನೆಂದಿತು. ಎಷ್ಟು ಸುಂದರವಾದ ಸಾಲುಗಳು. ಹಬ್ಬ ಹರಿದಿನಗಳು, ಮದುವೆ ಮೊದಲಾದ ಶುಭ ಸಂದರ್ಭಗಳಲ್ಲಿ ಹೆಣ್ಣು



ಮಕ್ಕಳು ತನ್ನ ಜಡೆಯನ್ನು ಹೂವಿನಿಂದ ಸುಂದರವಾಗಿ ಅಲಂಕಾರ ಮಾಡಿಕೊಳ್ಳುತ್ತಾರೆ. ಬೇಸಿಗೆ ರಜೆ ಬಂತೆಂದರೆ ಅಜ್ಜಿ ಮತ್ತು ಅಮ್ಮಂದಿರಿಗೆ ಒಮ್ಮೆಯಾದರೂ ಮೊಮ್ಮಕ್ಕಳು, ಮಕ್ಕಳಿಗೆ ಮೊಗ್ಗಿನ ಜಡೆಯನ್ನು ಹಾಕಿಸಿ ಸಂಭ್ರಮಿಸುತ್ತಾರೆ. ಕೂದಲನ್ನು ಒಪ್ಪವಾಗಿ ಬಾಚಿ, ಜಡೆ ಹೆಣೆದು ಚವುಲಿ ಜೋಡಿಸಿ, ಜಡೆಯ ತುದಿಗೆ ಗೊಂಡೆಗಳನ್ನು ಕಟ್ಟುತ್ತಾರೆ. ಆಮೇಲೆ ಮಲ್ಲಿಗೆಯಿಂದ ಜಡೆಯನ್ನು ಅಲಂಕರಿಸುತ್ತಾರೆ. ಮೊಗ್ಗಿನ ಜಡೆ ಹಾಕುವುದು ಒಂದು ಕಲೆ. ಈ ಮೊಗ್ಗಿನ ಜಡೆ ಹಾಕುವಲ್ಲಿ ನನ್ನ ಸೋದರತ್ತೆ ಪ್ರವೀಣರು ಎಂದು ಹೇಳಲು ನನಗೆ ಹೆಮ್ಮೆ. ಜಡೆ ಶೃಂಗಾರಗೊಂಡ ನಂತರ ರೇಷ್ಮೆ ಲಂಗ ಧರಿಸಿ ಫೋಟೋ ಸ್ಟುಡಿಯೋಗಳಿಗೆ ಹೋಗಿ, ಹಿಂದೆ ಒಂದು ಕನ್ನಡಿಯಲ್ಲಿ ಜಡೆಯು ಸಂಪೂರ್ಣ ಕಾಣುವಂತೆ, ಮುಂದಿನಿಂದ ಫೋಟೋ ತೆಗೆಸುತ್ತಿದ್ದರು. ಈಗಲೂ ಹಲವರ ಮನೆಯಲ್ಲಿ ಈ ಭಾವ ಚಿತ್ರವನ್ನು ಕಾಣಬಹುದು. ನಮ್ಮ ಕರಾವಳಿಯಲ್ಲಿ ಈ ಮೊಗ್ಗಿನ ಜಡೆಯನ್ನು ಮಲ್ಲಿಗೆಯಲ್ಲಿ ಮಾಡುವುದು ಒಂದು ಕ್ರಮ.

ಕರಾವಳಿಯಲ್ಲಿ ವಿವಿಧ ಹೆಸರುಗಳಲ್ಲಿ ಮಲ್ಲಿಗೆದೊರೆಯುತ್ತದೆ. ಕುಂದಾಪುರ ಪ್ರದೇಶದಲ್ಲಿ ಬೆಳೆಯುವ ಮಲ್ಲಿಗೆಯನ್ನು ಭಟ್ಕಳ ಮಲ್ಲಿಗೆಯೆಂದು, ಶಂಕರಪುರ ಶಿರ್ವ ಪ್ರದೇಶದಲ್ಲಿ ಬೆಳೆಯುವ ಮಲ್ಲಿಗೆಯನ್ನು ಶಂಕರಪುರ ಮಲ್ಲಿಗೆ ಎಂದೂ, ಪುತ್ತೂರು, ಸುಳ್ಯದಲ್ಲಿ ಬೆಳೆಯುವ ಮಲ್ಲಿಗೆಯನ್ನು ಮಂಗಳೂರು ಮಲ್ಲಿಗೆಯೆಂದು ಕರೆಯುತ್ತಾರೆ. ಇವೆಲ್ಲವೂ"ಜಾಸ್ಮಿನಮ್ ಸಂಬಾಕ್ ಎಂಬ ಒಂದೇ ಪ್ರಭೇದಕ್ಕೆ



ಸೇರಿದ್ದರೂ ಹವಾಮಾನ ಮತ್ತು ಮಣ್ಣಿನ ಗುಣಕ್ಕೆ ಅನುಗುಣವಾಗಿ ಪ್ರದೇಶದಿಂದ ಪ್ರದೇಶಕ್ಕೆ ಹೂವಿನ ಗಾತ್ರ ಮತ್ತು ಪರಿಮಳದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸಗಳನ್ನು ಕಾಣಬಹುದು. ಹಾಗೆಯೇ ಶಂಕರಪುರ ಮಲ್ಲಿಗೆಯನ್ನು ಬಾಳೆ ಹಗ್ಗದಲ್ಲಿ ಕಟ್ಟಿದರೆ, ಭಟ್ಕಳ ಮಲ್ಲಿಗೆಯನ್ನು ದಾರದಿಂದ ಕಟ್ಟುಲಾಗುತ್ತದೆ(ಪೋಣಿಸಲಾಗುತ್ತದೆ). ಈ ಮಲ್ಲಿಗೆಯನ್ನು ಕಟ್ಟುವ ಶೈಲಿ ಕೂಡ ವಿಭಿನ್ನ. 800 ಹೂವುಗಳನ್ನು ಪೋಣಿಸಿದಾಗ 1 ಚಂಡು ಹೂವು. 4 ಚಂಡು ಸೇರಿದರೆ ಒಂದು ಅಟ್ಟೆ. ಒಂದು ಅಟ್ಟೆಯಲ್ಲಿ 10 ಮೊಳ ಹೂವಿರುತ್ತದೆ.ಕರಾವಳಿಯಲ್ಲಿ ಮಲ್ಲಿಗೆಯ ಕೃಷಿ ಮತ್ತು ಮಾರಾಟ ಒಂದು ಉದ್ಯಮದ ರೂಪವನ್ನು ಪಡೆದಿದೆ. ಸ್ಥಳೀಯವಾಗಿ, ಮುಂಬಯಿ ಮತ್ತು ದುಬೈನಲ್ಲಿ ಈ ಹೂವಿನ ಮಾರುಕಟ್ಟೆ ಪ್ರಮುಖ ಸ್ಥಾನ ಪಡೆದಿದೆ. ಇದೇನೇ ಇರಲಿ, ನಮ್ಮ ಕರಾವಳಿಗೆ ಭೇಟಿ ಮಾಡಿದಾಗ ಮಲ್ಲಿಗೆ ತಗೊಂಡು ಮುಡಿಯೋದು ಮಾತ್ರ ಮರಿಬೇಡಿ!

***ಹಚ್ಚೇವು ಕನ್ನಡದ ದೀಪ...***

ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್
rajanisomayaji@gmail.com



## ಕ್ಯಾರೊಲಿನ ಕನ್ನಡ ಬಳಗ - ರಾಜ್ಯೋತ್ಸವ ಆಚರಣೆ : ಅಭಿಜ್ಞಾ ನಾಗೇಶ್

ಡಿಸೆಂಬರ್ ಒಂದನೇ ತಾರೀಖು ನಾವೆಲ್ಲ ಕ್ಯಾರೋಲೈನ ಕನ್ನಡ ಬಳಗದ "ದೀಪಾವಳಿ ಮತ್ತು ರಾಜ್ಯೋತ್ಸವ ಆಚರಣೆ" ಕಾರ್ಯಕ್ರಮಕ್ಕೆ ಹೋಗಿದ್ದೆವು. ಈ ಕಾರ್ಯಕ್ರಮ ಹಿಂದೂ ಸೆಂಟರ್ ನ ವಿಹಾರ್ ಹಾಲ್ ನಲ್ಲಿ ನಡೆಯಿತು.

"ನಾಡಗೀತೆ ಮತ್ತು ಹಚ್ಚೇವು ಕನ್ನಡದ ದೀಪ" ಹಾಡುಗಳನ್ನು ಹಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದವು. ನಾವೆಲ್ಲ "ಚಿಗುರು ಕನ್ನಡ ಶಾಲೆ"ಯ ಮಕ್ಕಳು ಎಂದಿನಂತೆ ವಿಶೇಷ ಕಾರ್ಯಕ್ರಮದಲ್ಲಿ, "ಕಸುಬು- ಫ್ಯಾಷನ್ ಶೋ"ನಲ್ಲಿ ಭಾಗವಹಿಸಿದ್ದೆವು. ನಾನು "ವಿಜ್ಞಾನಿ"ಯ ಪಾತ್ರವನ್ನು ನಿರ್ವಹಿಸಿದ್ದೆ. ಎಲ್ಲ ಕಾರ್ಯಕ್ರಮಗಳು ಚೆನ್ನಾಗಿತ್ತು. ಅದರಲ್ಲೂ "ಜಮ್ಮ ಜಮ್ಮ ಬಾಯ್ಸ್" ತಂಡದವರ ಡಾನ್ಸ್ ತುಂಬಾ ಸ್ಪೆಷಲ್ ಆಗಿತ್ತು. ಬಟ್ಟೆಗೆ ಲೈಟ್ಸ್ ಹಾಕಿ ಕತ್ತಲಲ್ಲಿ ಡಾನ್ಸ್ ಮಾಡಿದ್ದರು. ಅವರು "ಜಮ್ಮ ಜಮ್ಮ ಫೌಂಡೇಶನ್" ಎಂಬ ಸಂಸ್ಥೆ ಸ್ಥಾಪಿಸಿ, ಭಾರತದ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದಾರೆ ಮತ್ತು ಅನೇಕ ರೀತಿಯ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ. ಅಂದು ವಿಶೇಷವಾಗಿ "ದೇವದಾಸಿಯರ ಕಲ್ಯಾಣಕ್ಕಾಗಿ ಒಂದು ಲಕ್ಷ ರೂಗಳನ್ನು ಕೊಡುಗೆಯಾಗಿ ಕೊಟ್ಟರು. ಇದೆಲ್ಲದರ ಜೊತೆಗೆ ಶ್ರೀಮತಿ ವಾಣಿ ಸತೀಶ್ ರವರ ಅದ್ಭುತ ಗಾಯನ ಕಾರ್ಯಕ್ರಮವಿತ್ತು. ನಾವೆಲ್ಲ ಅವರ ಹಾಡುಗಳನ್ನು ಎಂಜಾಯ್ ಮಾಡಿದೆವು. ನನಗೆ ತುಂಬಾ ಖುಷಿಯಾಯ್ತು. ರುಚಿಯಾದ ಊಟವೂ ಇತ್ತು. ಮುಂದೆ ಏಪ್ರಿಲ್ ನಲ್ಲಿ ಬರುವ "ಯುಗಾದಿ" ಆಚರಣೆ ಕಾರ್ಯಕ್ರಮಕ್ಕೆ ಎಕ್ಸೈಟೆಡ್ ಆಗಿ ನಾವೆಲ್ಲ ಕಾಯುತ್ತಿದ್ದೇವೆ.










## ವ್ಯಕ್ತಿ ಪರಿಚಯ : ಡಾ. ಕೆ . ಶಿವರಾಂ ಕಾರಂತ

ಕಡಲ ತೀರದ ಭಾರ್ಗವ ಎಂದು ಪ್ರಖ್ಯಾತಿಯನ್ನು ಪಡೆದ ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬಲ್ಲಿ ೧೯೦೨ರ ಅಕ್ಟೋಬರ್ ೧೦ರಂದು ಜನಿಸಿದರು. ಇವರ ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ ಕಾರಂತರು. ಶಿವರಾಮ ಕಾರಂತರಿಗೆ ಪರಿಸರವೆಂದರೆ ಬಹಳ ಪ್ರೀತಿ. ಅವರು ಬಾಲ್ಯದಲ್ಲಿ ಕೆರೆಗಳ ಬಳಿ, ಏರಿಗಳ ಬಳಿ, ಸಮುದ್ರತೀರ, ಮರದ ನೆರಳಿನ ಪ್ರದೇಶಗಳಲ್ಲಿ ಸಮಯವನ್ನು ಕಳೆಯುತ್ತಿದ್ದರು. ಆಧುನಿಕ ವಿದ್ಯಾಭ್ಯಾಸ ಕೇವಲ ಹೊಟ್ಟೆಪಾಡಿಗಾಗಿ ಎನ್ನುವುದು ಅವರ ಅಭಿಪ್ರಾಯ. ನಿಜವಾದ ವ್ಯಕ್ತಿತ್ವದ ವಿಕಸನವಾದರೆ ಅದೇ ನಿಜವಾದ ಶಿಕ್ಷಣವೆನ್ನುವುದು ಅವರ ಅಭಿಪ್ರಾಯವಾಗಿತ್ತು. ಯುವಕರಾಗಿದ್ದಾಗ, ಸಮಾಜ ಸುಧಾರಣೆಗೂ ಕೈ ಹಾಕಿದ್ದರು. ಯಕ್ಷಗಾನ ತಂಡಗಳನ್ನು ಕಟ್ಟಿಕೊಂಡು ದೇಶ ವಿದೇಶಗಳಲ್ಲಿ ಈ ಕಲೆಯನ್ನು ಪ್ರಚುರಪಡಿಸಲು ಯತ್ನಿಸಿದರು. ಮಕ್ಕಳಲ್ಲಿದ್ದ ಪ್ರತಿಭೆ ಅರಳಿಸಲು ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಬಾಲವನ ಎಂಬ ಶೈಕ್ಷಣಿಕ ಕೇಂದ್ರವನ್ನು ತೆರೆದಿದ್ದರು

ಕಾರಂತರು ಕೆಲಕಾಲ ತರಂಗ ಸಾಪ್ತಾಹಿಕದ 'ಬಾಲವನ' - ಮಕ್ಕಳ ವಿಭಾಗದಲ್ಲಿ 'ಬಾಲವನದಲ್ಲಿ ಕಾರಂತಜ್ಜ' ಎಂಬ ಕಾಲಂ ನಡೆಸಿ ಕೊಡುತ್ತಿದ್ದರು. ಇದು ಬಹಳವಾಗಿ ಜನಪ್ರಿಯವಾಗಿತ್ತು. ಪುಟಾಣಿಗಳು ಕಳುಹಿಸಿದ ವಿಜ್ಞಾನ ಕುರಿತ ಪ್ರಶ್ನೆಗಳಿಗೆ ಕಾರಂತರು ಮಕ್ಕಳಿಗೆ ಅರ್ಥವಾಗುವಂತೆ ಸರಳ ರೀತಿಯಲ್ಲಿ ಉತ್ತರ ನೀಡುತ್ತಿದ್ದರು. ಆಗಿನ ತಲೆಮಾರಿನ ಕನ್ನಡಿಗರಿಗೆ ಕಾರಂತರು, 'ಕಾರಂತಜ್ಜ' ರೆಂದೇ ಚಿರಪರಿಚಿತ.

ಸಾಹಿತಿಯಾಗಿ ಶಿವರಾಮ ಕಾರಂತರು ಪ್ರಸಿದ್ಧಿಯಾಗಿರುವಂತೆ, ಇತರ ಕ್ಷೇತ್ರಗಳಲ್ಲೂ ಅಪಾರ ಸಾಧನೆ ಮಾಡಿದವರು. ಕರ್ನಾಟಕದ ಪ್ರಮುಖ ಕಲೆಯಾದ ಯಕ್ಷಗಾನದ ಉಳಿವಿಗೆ ಪ್ರಯತ್ನಿಸಿ, ಅದರಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದರು. ತಾವೇ ಸ್ವತಃ ನೃತ್ಯವನ್ನು ಕಲಿತು, ಬ್ಯಾಲೆಯಲ್ಲೂ ಗಂಭೀರ ಪ್ರಯೋಗ ಮತ್ತು ಪ್ರಯತ್ನ ಮಾಡಿದ್ದರು.

‘ಬೆಟ್ಟದ ಜೀವ’, ‘ಅಳಿದ ಮೇಲೆ’ ಕೃತಿಗಳಲ್ಲಿ ಕಾರಂತರೇ ಸ್ವತಃ ನಿರೂಪಕರಾಗಿ ನಿಂತ ದರ್ಶನವಾಗುತ್ತದೆ. ಕಾರಂತರ ಬರವಣಿಗೆಗೂ, ಬದುಕಿನ ಬಗೆಗೆ ಅವರ ದೃಷ್ಟಿಗೂ ಇರುವ ಸಹಜ ಸಂಬಂಧ ಅವರ ಎಲ್ಲ ಕಾದಂಬರಿಗಳಲ್ಲೂ ಕಾಣಸಿಗುತ್ತದೆ. ‘ಚೋಮನ ದುಡಿ’, ‘ಬೆಟ್ಟದ ಜೀವ’, ‘ಮರಳಿ ಮಣ್ಣಿಗೆ’, ‘ಅಳಿದ ಮೇಲೆ’, ‘ಕನ್ನಡಿಯಲ್ಲಿ ಕಂಡಾತ’, ‘ಮೈ ಮನಗಳ ಸುಳಿಯಲ್ಲಿ’, ‘ಕುಡಿಯರ ಕೂಸು’, ‘ಮೂಕಜ್ಜಿಯ ಕನಸುಗಳು’, ಯಾವುದೇ ಭಾಷೆಯಲ್ಲಿನ ಉತ್ಕೃಷ್ಟ ಕಾದಂಬರಿಗಳು. ‘ಸನ್ಯಾಸಿಯ ಬದುಕು’, ‘ಜಗದೋದ್ಧಾರನಾ’, ‘ಕಣ್ಣಿದ್ದೂ ಕಾಣರು’, ‘ಕೇವಲ ಮನುಷ್ಯರು’, ‘ಕನ್ಯಾ ಬಲಿ’, ಮತ್ತು ಹಲವಾರು ನಾಟಕಗಳಲ್ಲಿ ಕಾರಂತರು ನಮ್ಮ ಸಮಾಜದ ಅನೇಕ ಹುಳುಕುಗಳನ್ನು ಎತ್ತಿ ತೋರಿಸಿದ್ದಾರೆ. ‘ಔದಾರ್ಯದ ಉರುಳಲ್ಲಿ’, ‘ಗೊಂಡಾರಣ್ಯ’, ‘ಮುಗಿದ ಯುದ್ಧ’, ‘ಮೂಜನ್ಮ'ದಂತ ಕಾದಂಬರಿಗಳಲ್ಲಿ ರಾಜಕೀಯ ಪ್ರಮುಖ ವಸ್ತು. ಕಾರಂತರ ಹಾಗೆ ವೈವಿಧ್ಯಮಯ ಕೃತಿಗಳನ್ನು ರಚಿಸಿದವರು ಕನ್ನಡದಲ್ಲಿ ವಿರಳ. ೪೪ ಕಾದಂಬರಿ, ೧೪ ನಾಟಕ, ೩ ಕಥಾಸಂಕಲನ, ೬ ಪ್ರಬಂಧಗಳು, ೯ ಕಲಾ ಗ್ರಂಥಗಳು, ೫ ಆತ್ಮಕಥೆ-ಜೀವನ ಚರಿತ್ರೆಗಳು, ಮಕ್ಕಳ ಸಾಹಿತ್ಯ-೨೫, ಇತ್ಯಾದಿ ೧೫0ಕ್ಕೂ ಮಿಗಿಲಾದ ಕೃತಿಗಳನ್ನು ರಚಿಸಿರುವ ಕಾರಂತರು ಕನ್ನಡದ ಹಿರಿಮೆ ಸಾರುವ ಹತ್ತಾರು ಗ್ರಂಥಗಳನ್ನು ರಚಿಸಿದ್ದಾರೆ. ವಿಜ್ಞಾನ ಪ್ರಪಂಚ, ಬಾಲ ಪ್ರಪಂಚ, ಚಿತ್ರಮಯಿ ದಕ್ಷಿಣ ಕನ್ನಡ, ಯಕ್ಷಗಾನ ಬಯಲಾಟ, ಸಿರಿಗನ್ನಡ ಅರ್ಥಕೋಶ, ಕಿಸಾಗೌತಮಿ, ಹುಚ್ಚುಮನಸ್ಸಿನ ಹತ್ತು ಮುಖಗಳು, ಮೂಕಜ್ಜಿ ಕನಸುಗಳು ಮೊದಲಾದ ಕೃತಿಗಳು ಕನ್ನಡ ಸಾಹಿತ್ಯದ ಪ್ರಪಂಚದಲ್ಲೇ ಮೈಲಿಗಲ್ಲಿನ ಕೃತಿಗಳಾಗಿವೆ.

### ಪ್ರಶಸ್ತಿ/ಪುರಸ್ಕಾರಗಳು

1955ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.
೧೯೫೮ಲ ಸ್ವೀಡನ್ ನ “ಲಾ ಅರ್ಕೈವ್ ಇಂಟರ್ ನ್ಯಾಷನಲ್” ಸಂಸ್ಥೆಯು ಕಾರಂತರು ಯಕ್ಷಗಾನಕ್ಕಾಗಿ ಮಾಡಿದ ಸೇವೆಗಾಗಿ ಕಂಚಿನ ಪದಕ ನೀಡಿ ಗೌರವ .
೧೯೫೯ರಲ್ಲಿ ಯಕ್ಷಗಾನ ಬಯಲಾಟ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.
೧೯೭೫ ರಲ್ಲಿ ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ.
೧೯೭೮ರಲ್ಲಿ ಮೂಕಜ್ಜಿಯ ಕನಸುಗಳು ಕೃತಿಗೆ ಜ್ಞಾನಪೀಠ ಪ್ರಶಸ್ತಿ.
೧೯೮೯ರಲ್ಲಿ ಮೈ ಮನಗಳ ಸುಳಿಯಲ್ಲಿ ಕಾದಂಬರಿಗೆ ಪಂಪ ಪ್ರಶಸ್ತಿ.
ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ.
೧೯೭೫ ರಲ್ಲಿ ಭಾರತ ಸರ್ಕಾರವು ಕಾರಂತರಿಗೆ “ಪದ್ಮಭೂಷಣ” ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಆದರೆ ಸರ್ಕಾರ ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗ ಅದನ್ನು ಕಾರಂತರು ವಿರೋಧಿಸಿ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿ ಪ್ರತಿಭಟಿಸಿದರು

ಅರ್ಥಪೂರ್ಣ ಬದುಕು ಕಳೆದ ಸಾಹಿತ್ಯ ದಿಗ್ಗಜ ಡಾ. ಶಿವರಾಮಕಾರಂತರು ೧೯೯೭, ಡಿಸೆಂಬರ್ ೦೯ ರಂದು ನಿಧನ ಹೊಂದಿದರು.

ಮಾಹಿತಿ ಸಂಗ್ರಹ – ಗೂಗಲ್



# ರಾಮಾಯಣ

## ೧. ರಾಮನ ಜನನ

ಸಾವಿರಾರು ವರ್ಷಗಳ ಹಿಂದೆ ಕೋಸಲ ರಾಜ್ಯದಲ್ಲಿ ಅಯೋಧ್ಯೆ ಎಂಬ ನಗರವಿತ್ತು. ಅದು ಸರಯೂ ನದಿಯ ದಂಡೆಯಲ್ಲಿತ್ತು. ಅಯೋಧ್ಯೆಯಲ್ಲಿ ದೊಡ್ಡ ರಾಜಬೀದಿಗಳು, ಭವ್ಯವಾದ ಅರಮನೆಗಳು, ಸುಂದರವಾದ ಉದ್ಯಾನವನಗಳು, ಆಕರ್ಷಕ ಮಳಿಗೆಗಳಿದ್ದವು. ನಗರದ ಜನರು ಸುಖ ಶಾಂತಿಯಿಂದ ಜೀವನ ನಡೆಸುತ್ತಿದ್ದರು. ಕೋಸಲ ರಾಜ್ಯವನ್ನು ದಶರಥ ಮಹಾರಾಜನು ಆಳುತ್ತಿದ್ದನು. ಅವನು ಪ್ರಜೆಗಳನ್ನು ಸುಖವಾಗಿ ನೋಡಿಕೊಳ್ಳುತ್ತಿದ್ದನು.

ದಶರಥ ಮಹಾರಾಜನಿಗೆ ೩ ಜನ ಮಡದಿಯರು. ಅವರೇ ಕೌಸಲ್ಯೆ, ಸುಮಿತ್ರೆ ಮತ್ತು ಕೈಕೇಯಿ. ಕೌಸಲ್ಯೆ ಹಿರಿಯ ರಾಣಿಯಗಿದ್ದಳು. ದಶರಥನು ಮೂವರು ಪತ್ನಿಯರನ್ನು ತುಂಬಾ ಪ್ರೀತಿಸುತ್ತಿದ್ದನು. ಆದರೆ ಕಿರಿಯ ರಾಣಿಯಾದ ಕೈಕೇಯಿಯನ್ನು ಸ್ವಲ್ಪ ಜಾಸ್ತಿ ಪ್ರೀತಿಸುತ್ತಿದ್ದನು. ಎಲ್ಲಾ ವೈಭವಗಳಿದ್ದರೂ ರಾಜನಿಗೆ ನೆಮ್ಮದಿ ಇರಲಿಲ್ಲ. ಮಕ್ಕಳಾಗದಿರುವುದೇ ಅವರ ಕೊರಗಿಗೆ ಕಾರಣವಾಗಿತ್ತು. ಅವನಿಗೆ ವಯಸ್ಸಾಗುತ್ತಾ ಬಂದಿತ್ತು. ರಾಜ್ಯದಲ್ಲಿ ಉತ್ತರಾಧಿಕಾರಿಯಾಗಿ ಒಬ್ಬ ಮಗ ಜನಿಸಿರಲಿಲ್ಲ.



ದಶರಥನು ದಿನನಿತ್ಯ ಕೊರಗುವುದನ್ನು ಕಂಡ ಮುನಿಗಳು, ಯಜ್ಞ ಮಾಡಿ ಮಕ್ಕಳನ್ನು ಪಡೆಯುವಂತೆ ಸಲಹೆ ನೀಡಿದರು. ಅವರ ಸಲಹೆಯಂತೆ ದಶರಥನು ಯಜ್ಞವನ್ನು ನೆರವೇರಿಸಿದನು. ಇದರಿಂದ ಪ್ರಸನ್ನಗೊಂಡ ಅಗ್ನಿ ದೇವ ಯಜ್ಞ ಕುಂಡದಿಂದ ಎದ್ದು ಬಂದು ದಶರಥನಿಗೆ ಪಾಯಸ ತುಂಬಿದ ಬಟ್ಟಲನ್ನು ಕೊಟ್ಟನು. "ಮಹಾರಾಜನೇ, ಈ ಪಾಯಸವು ದಿವ್ಯಶಕ್ತಿಯನ್ನು ಹೊಂದಿದೆ. ಇದನ್ನು ನಿನ್ನ ಪತ್ನಿಯರಿಗೆ ಹಂಚಿಬಿಡು. ಬೇಗನೆ ನಿನಗೆ ಗಂಡು ಮಕ್ಕಳಾಗುವರು" ಎಂದರು. ವರಗಳನ್ನು ನೀಡಿದ ಅಗ್ನಿದೇವನಿಗೆ ದಶರಥನು ಕೃತಜ್ಞತೆಗಳನ್ನು ಸಲ್ಲಿಸಿದನು. ಬಳಿಕ ಅಂತಃಪುರಕ್ಕೆ ತೆರಳಿ ಬಟ್ಟಲಲ್ಲಿರುವ ಪಾಯಸದ ಅರ್ಧ ಭಾಗವನ್ನು ಕೌಸಲ್ಯೆಗೆ ನೀಡಿದನು. ಉಳಿದ ಅರ್ಧ ಭಾಗವನ್ನು ಅವನು ಸುಮಿತ್ರೆಗೂ ಕೈಕೇಯಿಗೂ ಹಂಚಿದನು.


ಕೆಲಕಾಲದ ಬಳಿಕ ಮೂವ ರಾಣಿಯರೂ ಗಂಡು ಮಕ್ಕಳಿಗೆ ಜನ್ಮವಿತ್ತರು.ಕೌಸಲ್ಯೆಗೆ ರಾಮ, ಸುಮಿತ್ರೆಗೆ ಲಕ್ಷ್ಮಣ ಮತ್ತು ಶತ್ರುಘ್ನರು ಜನಿಸಿದರು, ಕೈಕೇಯಿಗೆ ಭರತನು ಹುಟ್ಟಿದನು. ದಶರಥನಿಗೆ ಬಹಳ ಸಂತೋಷವಾಯಿತು. ಅಯೋಧ್ಯೆ ಜನರೂ ಬಹಳ ಹಿಗ್ಗಿದರು. ದಶರಥನು ಎಲ್ಲಾ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರೂ, ಅವನಿಗೆ ರಾಮನಲ್ಲಿ ಸ್ವಲ್ಪ ಪ್ರೀತಿ ಜಾಸ್ತಿ ಇತ್ತು. ನೋಡಲು ಮುದ್ದುಮುದ್ದಾಗಿದ್ದ ರಾಮನು ಎಲ್ಲರ ಪ್ರೀತಿಗೆ ಪಾತ್ರನಾಗಿದ್ದನು. ದಶರಥನು ಒಂದು ಕ್ಷಣವೂ ಕೂಡ ರಾಮನನ್ನು ಬಿಟ್ಟಿರುತ್ತಿರಲಿಲ್ಲ.




ಮಾಹಿತಿ ಸಂಗ್ರಹ – ಗೂಗಲ್

ಮುಂದುವರಿಯುವುದು...

## ಶಾರ್ಲೆಟ್ ಗೆ ಸಂಸ್ಕೃತದ ಸವಿಯನ್ನು ತಂದು ಕೊಟ್ಟ ಡಾ.ಶ್ರೀಧರ್ ಮೂರ್ತಿ ಅವರೊಂದಿಗೆ ಒಂದು ಸಂಭಾಷಣೆ : ಪ್ರಕೃತಿ ಉಪಾಧ್ಯ



ನನ್ನ ಹೆಸರು ಶ್ರೀಧರ್ ಮೂರ್ತಿ ಅಂತ. ನಾನು ಮೈಸೂರಿನಲ್ಲಿ ಹುಟ್ಟಿದ್ದು. ನನ್ನ ಜನ್ಮ ದಿನ ಆಗಸ್ಟ್ 15 1952, ಸ್ವಾತಂತ್ರ್ಯ ದಿನ. ಮೈಸೂರಲ್ಲೇ ಹುಟ್ಟಿ ಬೆಳೆದದ್ದು. ಹೈಸ್ಕೂಲ್ ಓದಿದ್ದು ಕೃಷ್ಣಮೂರ್ತಿ ಪುರಂನ ವನಿತಾ ಸದನದಲ್ಲಿ. ನಂತರ ರಿಜನಲ್ ಕಾಲೇಜು ಹತ್ರ Demonstration school ನಲ್ಲಿ ಓದಿದೆ. ಆದಾದ ಮೇಲೆ ಯುವರಾಜ ಕಾಲೇಜಿನಲ್ಲಿ BSc ಮಾಡಿದ್ದು. ಹೈಸ್ಕೂಲ್ ಓದುತ್ತಿದ್ದಾಗ ಕೆಮಿಸ್ಟ್ರಿ ಮೇಸ್ಟ್ರು ವಿಜ್ಞಾನದ ಬಗ್ಗೆ ಆಸಕ್ತಿ ಹುಟ್ಟುವಂತೆ ಪ್ರೇರೇಪಿಸಿದ್ದರು. ನ್ಯಾಷನಲ್ ಸಯನ್ಸ್ ಟ್ಯಾಲೆಂಟ್ ಸ್ಕಾಲರ್ಶಿಪ್ ಪರೀಕ್ಷೆ ಯಲ್ಲಿ ನಾನು ಉತ್ತೀರ್ಣನಾಗಿದ್ದೆ. ನನಗೆ BSc, MSc, PhD ತನಕ ನನಗೆ ಸ್ಕಾಲರ್ಶಿಪ್ ಸಿಕ್ಕಿತು. ನಾಗಪುರ ಯುನಿವರ್ಸಿಟಿಯಲ್ಲಿ MSc ಮಾಡಿದೆ. ನಂತರ I I T ಚೆನ್ನೈ ನಲ್ಲಿ PhD ಮಾಡಿದ್ದು Analytical Chemistry ನಲ್ಲಿ ನನಗೆ Doctorate degree ಇದೆ. ಡಿಗ್ರಿ ಸಿಗುತಾನೇ ನನಗೂ ಪದ್ಮಗೂ ಮದುವೆ ಆಯಿತು. ನಂತರ ಪವನ್ ಹಿಟ್ಟಿದ. ಆಮೇಲೆ ನಾವು ಭಾರತ ದೇಶ ಬಿಟ್ಟು ಹ್ಯಾಲಿಫ್ಯಾಕ್ಸ್ ಬಂದ್ವಿ. ಡಾಲ್ಹೌಸಿ ಯುನಿವರ್ಸಿಟಿ ಯವರು ಸ್ಕ್ಯಾಲರ್ಶಿಪ್ ಕೊಟ್ಟು ಕರೆಸಿಕೊಂಡ್ರು. ಹಾಗೆಯೇ ಇಲ್ಲಿ ಬಂದ ಮೇಲೆ ಪ್ರೋಕ್ಟರ್ ಅಂಡ್ ಗ್ಯಾಂಬಲ್ ನಲ್ಲಿ ಕೆಲಸ ಸಿಕ್ಕಿತು. ಕೊನೆಗೆ Cincinnati ನಲ್ಲಿ 25 ವರ್ಷ ಇದ್ವಿ. ಅಲ್ಲಿಯೇ ನನ್ನ ಎರಡನೇ ಮಗ ಸೋಹಾನ್ ಹುಟ್ಟಿದ. 30 ವರ್ಷ P&G ನಲ್ಲಿ ಕೆಲಸ ಮಾಡಿ ನಿವೃತ್ತಿ ತಗೊಂಡು, ಮಗ, ಸೊಸೆ ಮತ್ತು ಮೊಮ್ಮಕ್ಕಳ ಸಮೀಪದಲ್ಲಿರಲು ಸೌತ್ ಕ್ಯಾರೊಲಿನಗೆ ಬಂದ್ವಿ. ನನ್ನ ತಂದೆ ರಾ. ವೆಂ. ಶ್ರೀನಿವಾಸ ಅಂತ ಪ್ರಸಿದ್ದವಾದ ಕಾದಂಬರಿಕಾರರು ಮತ್ತು ಲೇಖಕರು. ನಮ್ಮ ಅಮ್ಮ ಕೂಡ ತುಂಬಾ ಬರೆಯುತ್ತಾರೆ, ಕಥೆಗಳನ್ನು ಹೇಳುತ್ತಾರೆ. ಅವರು ಬರೆದ ಕಥೆ ಪುಸ್ತಕ ಕೂಡ ಸಧ್ಯದಲ್ಲಿ ಬಿಡುಗಡೆ ಆಗುತ್ತಾ ಇದೆ. ಅದು ಒಂದು ಹೆಚ್ಚುಗಾರಿಕೆ..

**ಪ್ರಶ್ನೆ**: ನಿಮಗೆ ಸಂಸ್ಕೃತದ ಬಗ್ಗೆ ಒಲವು ಮೂಡಿದ್ದು ಯಾವಾಗ?
**ಉತ್ತರ:** ನಾನು ಚಿಕ್ಕವನಿದ್ದಾಗ, ಭಾರತ ದೇಶದಲ್ಲಿ ಬೆಳೆಯುತಿದ್ದಾಗ ಸಂಸ್ಕೃತದ ಬಗ್ಗೆ ಏನೂ ಗೊತ್ತಿರಲಿಲ್ಲ. ಶಾಲೆಯಲ್ಲಿ ಕೂಡ ಕನ್ನಡ ಭಾಷೆ ತಗೊಂಡಿದ್ದು. ಆದರೆ ಇಲ್ಲಿ ಬಂದ ನಂತರ ನನ್ನ ೬೧ ನೆ ವರ್ಷದಲ್ಲಿ ಸಂಸ್ಕೃತದ ಪರಿಚಯವಾಯ್ತು. ನಾವು ಹಿಂದೂ ಹೆರಿಟೇಜ್ ಕ್ಲಾಸ್ ನಡೆಸುತ್ತಾ ಇದ್ದೆವು. ಆಗ ಸಂಸ್ಕೃತದಲ್ಲಿ ಮಾತಾಡುವ ಶಿಬಿರವನ್ನು ನಮ್ಮ ಮನೇಲಿ ಜ್ಯೋಸ್ನಾ ಅನ್ನೋರು ಮಾಡಿದ್ರು. ೨ ದಿನದಲ್ಲಿ ಮಾತಾಡುವ ಜೊತೆಗೆ ಸಣ್ಣ ರೂಪಕಗಳನ್ನೂ ಮಾಡುವಷ್ಟು ಜ್ಞಾನ ಸಿಕ್ಕಿತು. ಆಗ ಸಂಸ್ಕೃತ ಭಾಷೆ ಕಲೀ ಬಹುದು, ರಕ್ಷಣೆ ಮಾಡಬಹುದು ಅಂತ ಅದರಲ್ಲಿ ಆಸಕ್ತಿ ಬಂತು.
**ಪ್ರಶ್ನೆ:** ನೀವು ಯಾವಾಗಿನಿಂದ ಸಂಸ್ಕೃತ ಹೇಳಿಕೊಡೋಕೆ ಶುರು ಮಾಡಿದ್ರಿ?
**ಉತ್ತರ:** ಪ್ರಾಯಶಃ ೩ ವರ್ಷ ಆಗಿದೆ. ನಾವು ಕಲಿಯೋಕೆ ಶುರು ಮಾಡಿ ೫ ವರ್ಷ ಆಗಿದೆ.೨ ವರ್ಷ ನಾವು ಕಲಿತೆವು, ನಮಗೆ ಒಂದು ಜ್ಞಾನ ಬೇಕಲ್ಲವಾ ಹೇಳಿ ಕೊಡೋಕೆ. ಜ್ಯೋಸ್ನ ಅವರು, ಶಿಕ್ಷಕ ಹೇಗೆ ಆಗಬಹುದು, ಪಾಠ ಹೇಗೆ ಹೇಳಿಕೊಡಬೇಕು ಅಂತ ಸಹಾಯ ಸಹಾಯ ಮಾಡಿದ್ರು. ಸಂಸ್ಕೃತ ಭಾರತಿಯವರು ನಡೆಸುವ ಶಿಕ್ಷಣ ವರ್ಗಕ್ಕೂ ಹೋಗಿ ಕಲಿತಿದ್ದೇವೆ. ಹಾಗೇನೆ ನಾನು ಮತ್ತು ಪದ್ಮ ಶಿಬಿರ, ಸಂಸ್ಕೃತ ಸಂಭಾಷಣೆ ಕ್ಲಾಸ್, ಹೈಸ್ಕೂಲ್ SAFL ಗೆ ಪಾಠ ಹೇಳಿಕೊಡುತ್ತಾ ಇದ್ದೀವಿ.
**ಪ್ರಶ್ನೆ:** ನೀವು ಸಂಸ್ಕೃತ ಹೇಳಿ ಕೊಡುತ್ತಾ ಇರೋದು ಒಂದು volunteer ವರ್ಕ್. ಇದಕ್ಕೆ ಎಷ್ಟು ಸಮಯ ಸ್ಪೆಂಡ್ ಮಾಡುತ್ತೀರಾ?
**ಉತ್ತರ:** ಈಗ ನಾನು ನಿವೃತ್ತ. ಶುಕ್ರವಾರ ಒಂದು ದಿನ ಬಿಟ್ಟರೆ, ಬೇರೆ ಎಲ್ಲ ರಾತ್ರಿ ಸಂಸ್ಕೃತ ಪಾಠ ಮಾಡುವ ಕೆಲಸ ಇದೆ. ಅದಲ್ಲದೇ ಬೆಳಿಗ್ಗೆ ಹೊತ್ತಲ್ಲಿ ನಮ್ಮ ಜ್ಞಾನ ಜಾಸ್ತಿ ಮಾಡಿಕೊಳ್ಳಲು ೧ ಗಂಟೆ ಹೊತ್ತು ಕಲಿತೇವೆ.



## ಶಾರ್ಲೆಟ್ ಗೆ ಸಂಸ್ಕೃತದ ಸವಿಯನ್ನು ತಂದುಕೊಟ್ಟ ಡಾ.ಶ್ರೀಧರ್ ಮೂರ್ತಿ ಅವರೊಂದಿಗೆ ಒಂದು ಸಂಭಾಷಣೆ : ಪ್ರಕೃತಿ ಉಪಾಧ್ಯ

**ಪ್ರಶ್ನೆ:** ನೀವು ನಡೆಸುವ ಬಾಲವರ್ಗದ ಬಗ್ಗೆ ಹೇಳಿ.

**ಉತ್ತರ** : ಎಲ್ಲರೂ ಸಂಸ್ಕೃತದಲ್ಲಿ ಮಾತಾಡಬೇಕು ಅನ್ನೋದು ಸಂಸ್ಕೃತ ಭಾರತಿಯ ಧ್ಯೇಯ.ಯಾವ ಭಾಷೆ ಯಾರು ಮಾತಾಡುವುದಿಲ್ಲವೋ ಆವಾಗ ಆ ಭಾಷೆ ಮೃತ ಭಾಷೆ ಅಂತ ಆಗುತ್ತೆ. ಭಾಷಾ ಅನ್ನೋ ಪದದ ಅರ್ಥನೇ ಸಂಭಾಷಣೆ ಅಂತ. ಕನ್ನಡ ಭಾಷೆ, ಸಂಸ್ಕೃತ ಭಾಷೆ ಅಂತ ಹೇಳುತೀವಿ ಆದ್ರೆ ಇಂಗ್ಲೀಷ ಭಾಷೆಯಲ್ಲಿ ಮಾತಾಡುತ್ತೀವಿ. ಅದಕ್ಕೆ ಸಂಸ್ಕೃತ ಭಾರತಿ ಹೇಳುತ್ತೆ, "ಸಂಸ್ಕೃತ ಮಾತಾಡೋ ಜನರನ್ನುನಾವು ಜಾಸ್ತಿಮಾಡಬೇಕು.ಅದನ್ನು ಸಣ್ಣ ಮಕ್ಕಳಿಂದ ಶುರು ಮಾಡಬೇಕು". ೪-೫ ನೇ ವರ್ಷದಿಂದ ಸಂಸ್ಕೃತ ಓದೋಕೆ ಬರಿಯೋಕೆ ಮತ್ತು ಮಾತಾಡೋಕೆ ಹೇಳಿಕೊಡುತ್ತೇವೆ. ಕಳೆದ ವರ್ಷ ಸುರು ಮಾಡಿದ್ವಿ. ಈ ವರ್ಷ ಕೂಡ ಮುಂದುವರಿಸುತ್ತೇವೆ.

**ಪ್ರಶ್ನೆ:** SAFL ಇಂದ ಮಕ್ಕಳಿಗೆ ಏನು ಉಪಯೋಗ?

**ಉತ್ತರ:** ಒಳ್ಳೆಯ ಪ್ರಶ್ನೆ. SAFL ಅಂದ್ರೆ Samskrutha As a Foreign Language. ಹೈಸ್ಕೂಲ್ ಹೋಗೋ ಸಿದ್ಧತೆ ಮಾಡುವ ಮಕ್ಕಳು Spanish, Latin foreign Language ಆಗಿ ತಗೊಳೋ ಹಾಗೆ ಸಂಸ್ಕೃತವನ್ನು foreign Language ಆಗಿ ತಗೋಬಹುದು. ೩ ವರ್ಷದ ಪ್ರೊಗ್ರಾಮ್ ಇದು. 7 or 8 ನೇ ಕ್ಲಾಸ್ ನಲ್ಲಿ ಶುರು ಮಾಡುವುದು. SAFL ಶುರು ಮಾಡುವ ಮೊದಲು ಒಂದು ವಾರದ ಶಿಬಿರಕ್ಕೆ ಹೋಗಬೇಕು. ಶಿಬಿರದ ನಂತರ ವಾರಕ್ಕೆ ೧ ಗಂಟೆ ಕ್ಲಾಸ್ ಇರುತ್ತೆ. ಅದು WebEx ಕ್ಲಾಸ್. ೩ ವರ್ಷದ ಈ ಕೋರ್ಸ್ ಲ್ಲಿ ಸಂಸ್ಕೃತದಲ್ಲಿ ಮಾತಾಡುತ್ತೀರಿ, ದೇವನಾಗರಿ ಲಿಪಿ ಕಲಿತೀರಿ, ೩ ವರ್ಷದ ನಂತರ ನಿಮಗೆ ಸರ್ಟಿಫಿಕೇಟ್ ಮತ್ತು ಕ್ರೆಡಿಟ್ ಸಿಗುತ್ತೆ.

**ಪ್ರಶ್ನೆ:** ನೀವು ನಡೆಸುವ ಸಂಸ್ಕೃತಕ್ಕೆ ಸಂಭಂದಿಸಿದ ಬೇರೆ ಕಾರ್ಯಕ್ರಮಗಳ ಬಗ್ಗೆ ತಿಳಿಸಿ.

**ಉತ್ತರ :** ಶಾರ್ಲೆಟ್ ನಲ್ಲಿ ಏನೇನು ನಡೀತಿದೆ ಅಂತ ಹೇಳುತ್ತೀನಿ. ಮಕ್ಕಳ ತರಗತಿಗಳ ಬಗ್ಗೆ ಹೇಳಿದೆ. ಹಾಗೇನೇ ದೊಡ್ಡವರು, ಅಪ್ಪ ಅಮ್ಮಂದಿರು ಸ್ವಲ್ಪನೂ ಸಂಸ್ಕೃತ ಗೊತ್ತಿಲ್ಲದಿದ್ದರೂ ಅವರಿಗೆ ಮಾತಾಡಲು ಒಂದು ದಿನದ ಶಿಬಿರದಲ್ಲಿ ಹೇಳಿಕೊಡುತ್ತೇವೆ. ನಂತರ ಸಂಭಾಷಣ ಕ್ಲಾಸ್ ನಲ್ಲಿ ಕಲಿಕೆ ಮುಂದುವರಿಸಬಹುದು. ಹಾಗೇನೆ ಆವಾಸಿ ಶಿಬಿರ ಅಂತನೂ ನಡೆಯುತ್ತದೆ. ಅದಕ್ಕೆ ಪರಿವಾರದ ಎಲ್ಲರೂ ಹೋಗಬಹುದು. ಅಲ್ಲಿ ಎಲ್ಲರೂ ಸಂಸ್ಕೃತದಲ್ಲಿ ಮಾತಾಡಬಹುದು. ಶಿಬಿರಗಳು, ಕ್ಲಾಸ್ ಗಳು ಭಗವದ್ಗೀತೆ ಕ್ಲಾಸ್, ಎಲ್ಲಾ ತರಹದ ಕಾರ್ಯಕ್ರಮಗಳು ನಡೆಯುತ್ತದೆ.

**ಪ್ರಶ್ನೆ:** ಸಂಸ್ಕೃತ ಭಾಷೆಯ ಕುರಿತು ನಿಮ್ಮ ಮುಂದಿನ ಗುರಿ ಏನು?

**ಉತ್ತರ :** ಇನ್ನೂ ಚೆನ್ನಾಗಿ, ನಿರರ್ಗಳವಾಗಿ, ಆಂಗ್ಲ ಪದ ಬಳಕೆ ಮಾಡದೇ ಸಂಸ್ಕೃತದಲ್ಲೇ ಮಾತಾಡಬೇಕು ಅನ್ನೋದು ನಮ್ಮ ಒಂದು ಧ್ಯೇಯ. ಪ್ರತಿ ತಿಂಗಳೂ ಮಾಸಿಕ ಸಂಭಾಷಣ ಮೇಳ ಅಂತ ೨ ಗಂಟೆ ಎಲ್ಲರೂ ಸೇರಿ ಸಂಸ್ಕೃತದಲ್ಲಿ ಸಂಭಾಷಿಸಲು ಸೌಕರ್ಯ ಮಾಡುವುದು. ಮುಂದಿನ ವರ್ಷ ಹಲವು ಕಾರ್ಯಕ್ರಮ ಮಾಡುವ ಯೋಜನೆ ಇದೆ. ಶಾರ್ಲೆಟ್ ನಲ್ಲಿ ಸಂಸ್ಕೃತ ಮಾತಾಡುವ ಜನರ ಸಂಖ್ಯೆ ಜಾಸ್ತಿ ಮಾಡಬೇಕು ಹಾಗೆಯೇ ಸಂಸ್ಕೃತ ಗೃಹಗಳ (ಒಂದಕ್ಕಿಂತ ಹೆಚ್ಚು ಜನ ಸಂಸ್ಕೃತ ಮಾತಾಡುವ ಮನೆ) ಸಂಖ್ಯೆ ಕೂಡ ಜಾಸ್ತಿ ಮಾಡಬೇಕು.

**ಪ್ರಶ್ನೆ:** ನಮ್ಮ ಚಿಗುರು ಪಾಠ ಶಾಲೆ ಮಕ್ಕಳಿಗೆ ಸಂಸ್ಕೃತದ ಬಗ್ಗೆ ಏನು ಹೇಳೋಕೆ ಇಷ್ಟ ಪಡುತೀರ?

**ಉತ್ತರ:** ಹೇಳಿದೆನಲ್ವಾ, ನಾವು ಸಾಮಾನ್ಯವಾಗಿ ಕನ್ನಡದಲ್ಲಿ ಮಾತಾಡುವಾಗ ಅನೇಕ ಸಂಸ್ಕೃತ ಪದಗಳ ಬಳಕೆ ಮಾಡುತ್ತೇವೆ.ಇದರಿಂದ ಸಂಸ್ಕೃತ ಕಲಿಯೋದು ನಿಮಗೆ ಸುಲಭ ಆಗುತ್ತೆ. ಮಕ್ಕಳೇ, ಸಂಸ್ಕೃತ ಕನ್ನಡದ ಮಾತೆ.ಹಾಗಾಗಿ ಕನ್ನಡನೂ ಉಳೀಬೇಕು ಜೊತೆಗೆ ಕನ್ನಡದ ಮಾತೆಯಾದ ಸಂಸ್ಕೃತವನ್ನು ಉಳಿಸಬೇಕು.


**ಪ್ರಶ್ನೆ:** ನಮ್ಮ ಚಿಗುರು ಪಾಠ ಶಾಲೆ ಮಕ್ಕಳಿಗೆ ಕನ್ನಡದಲ್ಲಿ ಯಾಕೆ ಮಾತಾಡಬೇಕು ಮತ್ತು ಕನ್ನಡ ಯಾಕೆ ಕಲೀಬೇಕು ಅಂತ ಹೇಳುತೀರಾ?

**ಉತ್ತರ**: ಯಾಕೆಂದ್ರೆ, ನಮ್ಮ ಸಂಸ್ಕೃತಿ, ನಡೆ ನುಡಿಯನ್ನು, ನಮ್ಮ ಹೆರಿಟೇಜ್ ನ ಉಳಿಸಿ ಕೊಳ್ಳಲು ನಮ್ಮ ಭಾಷೆ, ಕನ್ನಡವನ್ನು ಕಲೀಬೇಕು. ಮಕ್ಕಳ ಪೋಷಕರು, ಮಕ್ಕಳ ಜೊತೆ ಮನೆಯಲ್ಲಿ ಕನ್ನಡ ಮಾತಾಡಿ, ಮಕ್ಕಳಿಗೆ ಕನ್ನಡದ ಬಗ್ಗೆ ಆಸಕ್ತಿ ಮೂಡಿಸಬೇಕು.



## ಪ್ರಾಣಿ ಪ್ರಪಂಚ : ಆರುಶ್ ಯೆಲಿಮೆಲಿ

**ಬಂಗಾಳ ಹುಲಿ(ರಾಯಲ್ ಬಂಗಾಳ ಟೈಗರ್. ವೈಜ್ಞಾನಿಕ ಹೆಸರು: ಪ್ಯಾಂಥೆರಾ ಟೈಗ್ರಿಸ್ ಟೈಗ್ರಿಸ್)**




ಪ್ರಾಣಿಶಾಸ್ತ್ರದ ಪ್ರಕಾರ ಫೆಲಿಡೇ ಕುಟುಂಬಕ್ಕೆ ಸೇರಿದ ಒಂದು ಜೀವಿ. ಪ್ಯಾಂಥೆರಾ ವಂಶಕ್ಕೆ ಸೇರಿದ ೪ ದೊಡ್ಡ ಬೆಕ್ಕುಗಳ ಪೈಕಿ ಹುಲಿ ಅತ್ಯಂತ ದೊಡ್ಡ ಪ್ರಾಣಿ. ದಕ್ಷಿಣ ಮತ್ತು ಪೂರ್ವ ಏಷ್ಯಾಗಳಲ್ಲಿ ವ್ಯಾಪಕವಾಗಿ ಕಾಣಬರುವ ಹುಲಿ ತನ್ನ ಆಹಾರವನ್ನು ಬೇಟೆಯಾಡಿ ಮಾಂಸ ಸಂಪಾದಿಸುವ ಪ್ರಾಣಿಗಳ ಗುಂಪಿಗೆ ಸೇರಿದೆ. ಹುಲಿಯು ೪ ಮೀ. ವರೆಗೆ (೧೩ ಅಡಿ) ಉದ್ದವನ್ನು ಹಾಗೂ ೩೦೦ ಕಿ.ಗ್ರಾಂ ವರೆಗೆ ತೂಕವನ್ನು ಹೊಂದಬಹುದು. ದೊಡ್ಡ ದೇಹ ಮತ್ತು ಅಪಾರ ಬಲ ಹೊಂದಿರುವ ಹುಲಿಯ ಕಣ್ಸೆಳೆಯುವ ಲಕ್ಷಣವೆಂದರೆ ಬಿಳೀ ಅಥವಾ ಹಳದಿ ಯಾ ಕೇಸರಿ ಬಣ್ಣದ ಮೈ ಮೇಲೆ ನೀಳವಾಗಿ ಮೇಲಿನಿಂದ ಕೆಳಗೆ ಇರುವ ಗಾಢ ಬಣ್ಣದ ಪಟ್ಟೆಗಳು. ಸಾಮಾನ್ಯವಾಗಿ ಹುಲಿಯ ದೇಹದ ಅಡಿಯ ಭಾಗ ತೆಳು ಬಣ್ಣದ್ದಾಗಿರುತ್ತದೆ. ಹುಲಿಗಳ ಉಪತಳಿಗಳಲ್ಲಿ ಒಂದಾದ ಬಂಗಾಳ ಹುಲಿ ಭಾರತ, ಬಾಂಗ್ಲಾದೇಶ,ಭೂತಾನ್, ಬರ್ಮಾ ಮತ್ತು ನೇಪಾಳದಲ್ಲಿ ಕಾಣಬರುತ್ತದೆ .

ಇಂದು ಬಂಗಾಳದ ಹುಲಿಗಳ ಒಟ್ಟು ಸಂಖ್ಯೆ ಸುಮಾರು ೨೦೦೦ ದಷ್ಟು. ತೀವ್ರ ಗತಿಯಲ್ಲಿ ಅವನತಿಯತ್ತ ಸಾಗುತ್ತಿದ್ದ ಈ ಜೀವಿಯನ್ನು ಇಂದು ಭಾರತದಲ್ಲಿ ಸಂರಕ್ಷಿತ ಜೀವಿಯನ್ನಾಗಿ ಘೋಷಿಸಲಾಗಿದ್ದು Project Tiger ಎಂಬ ಮಹತ್ವಾಕಾಂಕ್ಷೆಯ ಯೋಜನೆಯಡಿಯಲ್ಲಿ ಕಾಪಾಡಿಕೊಳ್ಳಲಾಗುತ್ತಿದೆ. ಆದರೆ ಕಳ್ಳಬೇಟೆಯಿಂದಾಗಿ ಈ ಹುಲಿಯು ದಿನೇ ದಿನೇ ವಿನಾಶದತ್ತ ಸಾಗುತ್ತಿದೆ.




ಸಾಮಾನ್ಯ ಹೆಸರು: ಬಂಗಾಳ ಟೈಗರ್
ವೈಜ್ಞಾನಿಕ ಹೆಸರು: ಪ್ಯಾಂಥೆರಾ ಟೈಗ್ರಿಸ್ ಟೈಗ್ರಿಸ್
ಕೌಟುಂಬಿಕತೆ: ಸಸ್ತನಿಗಳು
ಆಹಾರ: ಕಾರ್ನಿವೊರೆಸ್
ಕ್ಯಾಪ್ಟಿವಿಟಿಯಲ್ಲಿ ಸರಾಸರಿ ಜೀವಿತಾವಧಿ: 8 ರಿಂದ 10 ವರ್ಷಗಳು.
ಗಾತ್ರ: ಹೆಡ್ ಮತ್ತು ದೇಹ, 5 ರಿಂದ 6 ಅಡಿ; ಬಾಲ, 2 ರಿಂದ 3ಅಡಿ
ತೂಕ: 240 ರಿಂದ 500 ಪೌಂಡ್
ಬಣ್ಣ : ಕೇಸರಿ , ಬಿಳಿ ಹಾಗು ಕಪ್ಪು ಗೆರೆಗಳು
ಇಷ್ಟವಾದ ಆಹಾರ: ಜಿಂಕೆ


# ಚೆಣ್ಣರ ಚಿತ್ತಾರ


ಮರಗಳು :-
ಮರಗಳು ನಮಗೆ ನೆರಳು ಕೊಡುತ್ತವೆ.
ಮರಗಳು ಕಲಿಯಲು ಆಸಕ್ತಿಕರ ವಿಷಯ.
ಮರಗಳ ಬೇರು ನಮಗೆ ಉಸಿರಾಡಲು
ಆಮ್ಲಜನಕ ನೀಡುತ್ತವೆ. ನಾವು ಅವುಗಳಿಗೆ
ಇಂಗಾಲಜನಕ ಅನಿಲವನ್ನು ನೀಡುತ್ತೇವೆ.
ಮರಗಳು ನೂರಾರು ವರ್ಷಗಳು ಬದುಕುತ್ತವೆ.
ಅವುಗಳು ಅನೇಕ ಬಣ್ಣಗಳನ್ನು ಹೊಂದಿರುತ್ತವೆ.
ಜನರು ಮನೆಗಳನ್ನು ಕಟ್ಟಲು ಮರಗಳನ್ನು
ಕತ್ತರಿಸುವುದು ಸಮಸ್ಯೆಯಾಗಿದೆ. ಜನರು ಕತ್ತರಿಸಿದ
ಮರಗಳಿಗೆ ಬದಲಾಗಿ ಬೇರೆ ಗಿಡಗಳನ್ನು ನೆಡುವುದಿಲ್ಲ.
ಮರಗಳು ನಮಗೆ ತುಂಬಾ ಸಹಾಯವನ್ನು
ಮಾಡುತ್ತವೆ. ಕಿತ್ತಳೆ, ಸೇಬು, ಮತ್ತು ಪೇರುಹಣ್ಣಿನ
ಮರಗಳು ತುಂಬಾ ಇವೆ.
ಪ್ರೇರಣ ಗೌಡ

ಪ್ರೇರಣ ಗೌಡ


ತಿಂಗ್ಸ್ ಅಬೌಟ್ ಅಮ್ಮ
ನನ್ನ ಅಮ್ಮ almost ಮನೆಯ ಎಲ್ಲಾ ಕೆಲಸ
ಅವಳೇ ಮಾಡ್ತಾಳೆ. ಅಮ್ಮ ಇಲ್ಲಿಲ್ಲ ನಾನು
ಹೇಗೆ ಇರ್ತಿದ್ದೆ ಮತ್ತೆ ಏನು ಮಾಡ್ತಿದ್ದೆ ಅಂತ
ನನಗೆ ಒಂದೊಂದು ಸರಿ ಅನ್ಸುತ್ತೆ, because I
love my ಅಮ್ಮ. ನನ್ನ ಅಮ್ಮ ತುಂಬ ಒಳ್ಳೆಯವಳು.
ನನಗೆ ಒಳ್ಳೆ ಬಟ್ಟೆ, ಗಿಫ್ಟ್ ಕೊಡುತ್ತಾಳೆ. ನನಗೋಸ್ಕರ
ಮನೆಯಂಥ ಕೆಲಸ ಮಾಡ್ತಾಳೆ. ಹೋಂವರ್ಕ್‌ಗೆ
ಸಹಾಯ ಮಾಡ್ತಾಳೆ. ನಮ್ಮಮ್ಮ ಎಷ್ಟು ಒಳ್ಳೆಯವಳು
ಅಂದ್ರೆ, ಮಾಲ್‌ಗೆ ಹೋಗಿನಿ ನನಗೆ ಏನು ಬೇಕು
ಅಂಥ ಯೋಚನೆ ಮಾಡಿ ಎಲ್ಲಾ ತರುತ್ತಾಳೆ, ನನ್ನ
ಅಕ್ಕನಿಗೆ ಮತ್ತೆ ನನ್ನ ತಂದೆಯು ಸಹ. ಬೇರೆಯವರಿಗೂ
ಗಿಫ್ಟ್ ತರ್ತಾಳೆ. ಎಲ್ಲರ ಬಗ್ಗೆನೂ ಒಳ್ಳೆದು
ಯೋಚನೆ ಮಾಡ್ತಾಳೆ. ನನ್ನ ಅಮ್ಮ ಬುದ್ಧಿವಂತೆ,
ಫ್ಯಾಷನ್ ಹುಡುಗಿ, ಸುಂದರವಾಗಿದ್ದಾಳೆ ಮತ್ತೆ
ಎಲ್ಲರಿಗಿಂತಲ ಭಿನ್ನವಾಗಿದ್ದಾಳೆ. ನನಗೆ ನನ್ನ
ಅಮ್ಮ ಅಂದ್ರೆ ತುಂಬಾ ಇಷ್ಟ.

ಇಂಚರ ಗೋಪಿನಾಥ್



2/21/18
ನಮ್ಮ ಮನೆ
ನಮ್ಮ ಮನೆಯಲ್ಲಿ 12 ಮೀನುಗಳಿವೆ.
ಅದರಲ್ಲಿ 6 ಮರಿ ಇದೆ ಮತ್ತು 6
ದೊಡ್ಡದಿದೆ.
ನಮ್ಮ ಮನೆಯಲ್ಲಿ 10 ಗ್ಯಾಲನ್ ಟ್ಯಾಂಕ್
ಇದೆ.
ಮೀನಿಗೆ ನೀರು ಸರಿ ಇರಬೇಕು
ಅದಕ್ಕೆ ಫಿಲ್ಟರ್ ಹಾಕಿ ಕ್ಲೀನ್ ಮಾಡಬೇಕು,
ಮತ್ತು ಮೀನಿಗೆ ಆಹಾರ ಹಾಕಬೇಕು.
ನಾಯಿ, ಬೆಕ್ಕು, ಹಕ್ಕಿ, ಎಲ್ಲ ಮೀನಿಗೆ
ಹೋಲಿಸಿದರೆ ಮೀನ್ ಸುಲಭವಾಗಿ
ಸಾಕಬಹುದು.
(JOKE)
ಮೀನು ಜೊತೆಗೆ ಆಡ ಬಹುದು
ಅಂತ ಗಲಾಟೆ ಮಾಡಿ ತೆಗೊಂಡ್ವಿ.
ಆಮೇಲೆ ಗೊತ್ತಾಯಿತು, ಮೀನು ಟ್ಯಾಂಕ್
ಇಂದ ತೆಗೆಯೋಕಾಗಲ್ಲ.
~ಪ್ರಮಿತಿ ಉಪಾಧ್ಯ

ಪ್ರಮಿತಿ ಉಪಾಧ್ಯ

**ಕಥಾ ಸಂಕಲನ**

# ಅಕ್ಬರ್ ಮತ್ತು ಬೀರಬಲ್ಲ

ಬಾದಶಹ ಅಕ್ಬರನಿಗೆ ಆಸ್ಥಾನಕ್ಕೆ ಬಂದಾಗ ಓರ್ವ ಸಭಾಸದನು ಒಂದು ಗುಲಾಬಿ ಹೂವನ್ನು ಅರ್ಪಿಸಿದನು. ಬಾದಶಹನು ಸಂತೋಷದಿಂದ ಅದನ್ನು ಸ್ವೀಕರಿಸಿದನು. ಆ ಹೂವಿನ ಚೆಲುವನ್ನು ಗಮನಿಸುತ್ತ ಅದರ ಪರಿಮಳವನ್ನು ಆಸ್ವಾದಿಸ ತೊಡಗಿದನು.
ಆಗ ಅವನಿಗೆ ಒಂದು ವಿಚಾರ ಹೊಳೆಯಿತು. ಬಹಳ ದಿನಗಳಿಂದ ಕೇಳಬೇಕು ಎಂದಿರುವ ಪ್ರಶ್ನೆಗಳು ಆತನ ಸ್ಮರಣೆಯಲ್ಲಿ ಸುಳಿದವು.
"ನಾನು ಕೆಲವು ಪ್ರಶ್ನೆಗಳನ್ನು ಕೇಳಬೇಕೆಂದಿರುವೆ. ಅದಕ್ಕೆ ಸಮಂಜಸವಾದ ಉತ್ತರಗಳನ್ನು ನೀವು ಯಾರಾದರೂ ಹೇಳಿರಿ" ಎಂದು ಸೂಚಿಸಿ
ಬಾದಶಹನು ಐದು ಪ್ರಶ್ನೆಗಳನ್ನು ಕೇಳಿದನು.




೧. ಹೂವುಗಳಲ್ಲಿ ಯಾವುದು ಶ್ರೇಷ್ಠ?
೨. ಯಾರ ಹಾಲು ಅತ್ಯುತ್ತಮ?
೩. ಉತ್ತಮ ದರ್ಜೆಯ ಸವಿ ಯಾವುದು?
೪. ಯಾವ ಗಿಡದ ಎಲೆ ಶ್ರೇಷ್ಠ?
೫. ಅರಸರಲ್ಲಿ ಶ್ರೇಷ್ಠನಾರು?

ಅಕ್ಬರನ ಮಾತು ಕೇಳಿ, ಕೆಲವರು ಮೊದಲನೇ ಪ್ರಶ್ನೆಗೆ ಅನೇಕ ಬಗೆಯಾಗಿ ಉತ್ತರಿಸಿದರು. 'ಜಹಂಪನಾ, ಗುಲಾಬಿ ಹೂವೇ ಶ್ರೇಷ್ಠ" ಎಂದ ಒಬ್ಬ."ಇಲ್ಲ ಜಹಂಪನಾ, ಕಮಲದ ಹೂವು ಅತ್ಯುತ್ತಮ" ಎಂದು ಮತ್ತೊಬ್ಬ ಉತ್ತರಿಸಿದ."ಹೆಚ್ಚು ಪರಿಮಳ ಬೀರುವ ಮಲ್ಲಿಗೆ ಉತ್ತಮ " ಎಂದ ಇನ್ನೊಬ್ಬ.ಹಾಲಿನ ಬಗೆಗೂ ಅದೇ ರೀತಿ ಚರ್ಚೆ ಆಯಿತು. ಕೆಲವರು ಹಸುವಿನ ಹಾಲು ಶ್ರೇಷ್ಠ ಎಂದರೆ, ಹಲವರು ಎಮ್ಮೆಯ ಹಾಲು, ಆಡಿನ ಹಾಲು ಅತ್ಯುತ್ತಮ ಎಂದು ಹೇಳಿದರು. ಸವಿಯ ಬಗ್ಗೆ ಮಿಠಾಯಿ ಹಾಗೂ ಕಬ್ಬಿನ ರುಚಿಯ ಬಗೆಗೆ ಹೇಳಿದರು. ಎಲೆಗಳ ಬಗ್ಗೆ ಚರ್ಚೆ ನಡೆದಾಗ, ಹಲವರು ಊಟದ ಬಾಳೆ ಎಲೆ, ಔಷಧಕ್ಕೆ ಆಗುವ ಬೇವಿನ ಎಲೆ, ತೋರಣದ ಮಾವಿನ ಎಲೆ ಬಗ್ಗೆ ತಮ್ಮ ತಮ್ಮ ಅಭಿಪ್ರಾಯ ಹೇಳಿದರು.
ಆ ದಿನ ಯಾವುದೇ ನಿರ್ಧಾರಕ್ಕೆ ಬರದೇ, ಮರುದಿನ ಬೀರಬಲ್ಲ ಬಂದಾಗ ಅವೇ ಪ್ರಶ್ನೆಗಳನ್ನು ಬಾದಶಹ ಬೀರಬಲ್ಲನಿಗೆ ಕೇಳಿದನು. ಆತ ತಕ್ಷಣ ಬಾದಶಹನ ಪ್ರಶ್ನೆಗೆ ಉತ್ತರಿಸಿದನು.
"ಹೂವುಗಳಲ್ಲಿ ಹತ್ತಿಯ ಹೂವು ಶ್ರೇಷ್ಠ, ಮರ್ಯಾದೆ ಮುಚ್ಚಿಕೊಳ್ಳಲು ಬೇಕಾದ ಬಟ್ಟೆಗಳನ್ನು ಹತ್ತಿಯ ಹೂವುನಿಂದಲೇ ತಯಾರಿಸಲಾಗುತ್ತದೆ."
"ತಾಯಿಯ ಹಾಲೇ ಉತ್ತಮ. ಎಲ್ಲರೂ ಬೆಳೆದು ದೊಡ್ಡವರಗುವುದು ತಾಯಿಯ ಹಾಲಿಂದಲೇ."
"ಎಲ್ಲ ಸವಿಗಿಂತಮಾತಿನ ಸವಿ ಶೇಷ್ಠವಾದದ್ದು. ಮಾತಿನಿಂದಲೇ ನಾವು ಸ್ನೇಹ ಸಂಪಾದಿಸುತ್ತೇವೆ."
"ಎಲೆಗಳಲ್ಲಿ ವೀಳ್ಯದ ಎಲೆ ಉತ್ತಮ. ವೀಳ್ಯದ ವಿನಿಮಯದಿಂದ ಉತ್ತಮ ಸಂಬಂಧ ಹಾಗು ಸ್ನೇಹ ಸಂಪಾದಿಸುತ್ತೇವೆ."
"ರಾಜರಲ್ಲಿ ಇಂದ್ರ ದೇವ ಶ್ರೇಷ್ಠ. ಅವನಿಂದ ಮಳೆ ಆಗುತ್ತದೆ.ಮಳೆಯಿಂದ ನಾವು ಅನ್ನ , ಬಟ್ಟೆ ಪಡೆಯುತ್ತೇವೆ.ಎಲ್ಲ ಪ್ರಾಣಿಗಳು ಇದರಿಂದ ಬದುಕುತ್ತವೆ."
ಬಾದಶಹ ಹಾಗೂ ಇತರರು ಬೀರಬಲ್ಲನ ಉತ್ತರಗಳಿಂದ ಸಂತುಷ್ಟರಾದರು.

## ನಾ ಕಂಡ ಸಿನಿಮಾ "ಭಕ್ತ ಪ್ರಹಲ್ಲಾದ" : ಶ್ರೀ ನಿಧಿ ಪುನಿಚತ್ತಾಯ



ನಾನು ನೋಡಿದ ಸಿನಿಮಾ "ಭಕ್ತ ಪ್ರಹಲ್ಲಾದ". ಇದು ಒಂದು ಪೌರಾಣಿಕ ಚಿತ್ರವಾಗಿದ್ದು, ಶ್ರೀ ವಿಜಯ್ ಅವರು ನಿರ್ದೇಶಿರುವ ಈ ಸಿನಿಮಾದಲ್ಲಿ ಡಾ| ರಾಜಕುಮಾರ್ ಅವರು ಮುಖ್ಯ ಪಾತ್ರದಲ್ಲಿ ನಟಿಸಿರುತ್ತಾರೆ. .
ಪ್ರಹಲ್ಲಾದನು ಕಯಾದು ಮತ್ತು ಹಿರಣ್ಯಕಶಿಪು ದಂಪತಿಯ ಪುತ್ರನಾಗಿದ್ದು ಮಹಾವಿಷ್ಣುವಿನ ಪರಮ ಭಕ್ತ. ಆದರೆ ಇವನ ತಂದೆ ಹಿರಣ್ಯಕಶಿಪು ಮಹಾವಿಷ್ಣುವಿನ ಪರಮ ವೈರಿ. ಹಿರಣ್ಯಕಶಿಪು ಬ್ರಹ್ಮನಿಗೆ ತಪಸ್ಸು ಮಾಡಿ, ಮಾನವ ಮತ್ತು ದಾನವರಿಂದ, ಹಗಲು ಮತ್ತು ರಾತ್ರಿ, ಅಸ್ತ್ರ ಮತ್ತು ಶಸ್ತ್ರಗಳಿಂದ, ಮನೆಯ ಒಳಗೆ ಮತ್ತು ಹೊರಗೆ ತನಗೆ ಸಾವು ಬರಬಾರದೆಂದು ವರವನ್ನು ಪಡೆದಿರುತ್ತಾನೆ.ಹರಿಯ ಭಕ್ತನಾದ ತನ್ನ ಮಗ ಪ್ರಹಲ್ಲಾದನನ್ನು ಚಿತ್ರ ಹಿಂಸೆ ಕೊಟ್ಟು ವಧಿಸಲು ಪ್ರಯತ್ನಿಸುತ್ತಾನೆ. ಆಗ ಮಹಾವಿಷ್ಣು ಕಂಬದಿಂದ ನರಸಿಂಹಾವತಾರವನ್ನು (ದೇಹದ ಅರ್ಧ ಭಾಗ ಮಾನವ ಅರ್ಧ ಭಾಗ ಸಿಂಹ ) ತಾಳಿ ಹಿರಣ್ಯಕಶಿಪುವನ್ನು ವಧಿಸುತ್ತಾನೆ. ನಂತರ ಪ್ರಹಲ್ಲಾದನು ತನ್ನ ತಂದೆಯ ಸಿಂಹಾಸನವನ್ನೇರುತ್ತಾನೆ.
ಇದು ಎಲ್ಲಾ ಮಕ್ಕಳಿಗೂ ಇಷ್ಟವಾಗುವ ಹಾಗೂ ನೋಡಲೇ ಬೇಕಾದ ಸಿನಿಮಾ.




**ಪ್ರವಾಸಿ ತಾಣ :** ಒಂದು ಭಾಗದಲ್ಲಿ ಸಮುದ್ರ, ಇನ್ನೊಂದು ಭಾಗದಲ್ಲಿ ಸೌಪರ್ಣಿಕಾ ನದಿ, ನಡು ಮಧ್ಯೆ ರಾಷ್ಟ್ರೀಯ ಹೆದ್ದಾರಿ. ಈ ಸುಂದರ ಸ್ಥಳವೇ ಕುಂದಾಪುರ ಸನಿಹದ **ಮರವಂತೆ**. ಇಲ್ಲಿನ ನದಿಯ ಹರವು, ಅದರ ದಡದಲ್ಲಿ ಬೆಳೆದಿರುವ ತೆಂಗಿನ ಮರಗಳ ನೋಟ, ನದಿಯಲ್ಲಿ ಚಲಿಸುವ ಪುಟ್ಟ ಪುಟ್ಟ ದೋಣಿಗಳು, ಸನಿಹ ಪಡುಕೋಣೆಗೆ ಹೋಗಲು ಅನುಕೂಲಮಾಡಿಕೊಡುವ ಸೇತುವೆಯ ನೋಟ,ಹತ್ತಿರದ ಕುರು ಎಂಬ ದ್ವೀಪದ ಸೌಂದರ್ಯ, ನದಿಯ ಹರವಿನ ತುದಿಯಲ್ಲಿ ಎದ್ದು ಕಾಣುವ ಕೊಡಚಾದ್ರಿರ ಪರ್ವತ ಎಲ್ಲವೂ ಇಲ್ಲಿನ ಪ್ರಾಕೃತಿಕ ಸೌಂದರ್ಯಕ್ಕೆ ಇಂಬು ನೀಡಿವ ಸುದೀರ್ಘವಾದ ಬೀಚ್ ಹೊಂದಿದ್ದು, ನದಿಯಲ್ಲಿ ಸಂಚರಿಸಲು ಬೋಟಿಂಗ್ ವ್ಯವಸ್ಥೆ ಇದೆ. ಸಮೀಪದಲ್ಲಿ ವರಹಾಸ್ವಾಮಿ ದೇವಸ್ಥಾನವಿದೆ. ಮಳೆ ಬಾರದಿದ್ದಾಗ ಇಲ್ಲಿ ವಿಶೇಷ ಪೂಜೆ ಸಲ್ಲಿಸಿ ಮಳೆ ಬರಿಸಿಕೊಳ್ಳುವ ಪ್ರತೀತಿ ಇದೆ. ಉಡುಪಿ ತಾಲ್ಲೂಕಿನ ಪ್ರವಾಸಿ ತಾಣಗಳಲ್ಲಿ ಇದು ಒಂದು ಪ್ರಮುಖ ಸ್ಥಳ.



ಚಿತ್ರಕಲಾ ಲೋಕ : ಸಿಂಧು ಕಿರಣ್



## ಮೈಸೂರು ಶೈಲಿ ಚಿತ್ರಕಲೆ:



ಮೈಸೂರು ಚಿತ್ರಕಲೆಯು ದಕ್ಷಿಣ ಭಾರತದ ಶಾಸ್ತ್ರೀಯ ಚಿತ್ರಕಲೆಯಲ್ಲಿ ಪ್ರಮುಖವಾದದ್ದು. ಮೈಸೂರು ಚಿತ್ರಕಲೆಯು ಮೊದಲು ವಿಜಯನಗರದಲ್ಲಿ (1336-1565 ಕ್ರಿ.ಶ.) ಹುಟ್ಟಿಕೊಂಡವು. ತಾಳಿಕೋಟೆ ಕದನದಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ ರಾಜಮನೆತನದ ಆಶ್ರಯದಲ್ಲಿರುವ ಕಲಾವಿದರು ಮೈಸೂರು,ತಂಜಾವೂರು, ಸುರಪುರ, ಇತ್ಯಾದಿ ವಿವಿಧ ಸ್ಥಳಗಳಿಗೆ ವಲಸೆ ಹೋದರು.ಇದು ಮರು ಹುಟ್ಟಿಕೊಂಡದ್ದು ಕರ್ನಾಟಕದ ಮೈಸೂರು ನಗರದಲ್ಲಿ. ಮೈಸೂರು ರಾಜರಾದ ಮುಮ್ಮಡಿ ಕೃಷ್ಣರಾಜ ವಡೆಯರವರು ಇದನ್ನು ಪ್ರೋತ್ಸಾಹಿಸಿದರು ಮತ್ತು ಪೋಷಿಸಿದರು. ಮೈಸೂರು ವರ್ಣಚಿತ್ರಗಳು ತಮ್ಮ ಸೌಂದರ್ಯ, ಮ್ಯೂಟ್ ಬಣ್ಣಗಳು ಮತ್ತು ವಿವರಗಳ ಬಗ್ಗೆ ಹೆಸರುವಾಸಿಯಾಗಿವೆ. ಈ ವರ್ಣಚಿತ್ರಗಳ ಹೆಚ್ಚಿನ ವಿಷಯಗಳು ಹಿಂದೂ ದೇವ-ದೇವತೆಗಳ ಮತ್ತು ಹಿಂದೂ ಪುರಾಣಗಳ ದೃಶ್ಯಗಳನ್ನು ಒಳಗೊಂಡಿರುತ್ತವೆ. ಮೈಸೂರು ಪ್ರಾಚೀನ ವರ್ಣಚಿತ್ರಕಾರರು ತಮ್ಮ ಸ್ವಂತ ವಸ್ತುಗಳನ್ನು ತಯಾರಿಸುತಿದ್ದರು. ನೈಸರ್ಗಿಕ ಮೂಲಗಳಿಂದ ಮತ್ತು ಎಲೆಗಳು, ಕಲ್ಲುಗಳು ಮತ್ತು ಹೂಗಳು, ತರಕಾರಿ, ಖನಿಜ ಮೂಲದ ಬಣ್ಣಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದರು. ಸೂಕ್ಷ್ಮ ಕೆಲಸಕ್ಕೆ ಅಳಿಲು ಕೂದಲಿನ ಕುಂಚಗಳು ಆದರೆ ಅತಿಸೂಕ್ಷ್ಮ ರೇಖಾಚಿತ್ರ ಸಾಲುಗಳಿಗೆ ಚೂಪಾದ ಬ್ಲೇಡುಗಳ ವಿಶೇಷ ವಿವಿಧ ಹುಲ್ಲಿನಿಂದ ಮಾಡಿದ ಕುಂಚಗಳನ್ನು ಬಳಸುತಿದ್ದರು .ಭೂಮಿ ಮತ್ತು ತರಕಾರಿ ಬಣ್ಣಗಳ ದೀರ್ಘಕಾಲೀನ ಗುಣಮಟ್ಟದ ಕಾರಣ, ಮೂಲ ಮೈಸೂರು ವರ್ಣಚಿತ್ರಗಳು ತಮ್ಮ ತಾಜಾತನವನ್ನು ಮತ್ತು ಹೊಳಪು ಇಂದಿಗೂ ಉಳಿಸಿಕೊಂಡಿವೆ.

ಸೂಕ್ಷ್ಮ ರೇಖೆಗಳು,ಪ್ರಕಾಶಮಾನವಾದ ತರಕಾರಿ ಬಣ್ಣಗಳು ಮತ್ತು ಹೊಳಪಿನ ಚಿನ್ನದ ಎಲೆಗಳನ್ನು ಅಥವಾ ಚಿನ್ನದ ಬಣ್ಣವನ್ನು ಜೆಸ್ಸೋ (jesso ) ಮೇಲೆ ಅಂಟಿಸುವುದು ಮೈಸೂರು ವರ್ಣಚಿತ್ರಗಳ ವಿಶಿಷ್ಟವಾಗಿದೆ. ಅಲಂಕಾರಿಕ ತುಣುಕುಗಳಿಗಿಂತ ಹೆಚ್ಚಾಗಿ, ವರ್ಣಚಿತ್ರಗಳು ವೀಕ್ಷಕರಲ್ಲಿ ಭಕ್ತಿ ಮತ್ತು ನಮ್ರತೆ ಭಾವನೆಗಳ ಸ್ಫೂರ್ತಿ ಬರುವಂತೆ ವಿನ್ಯಾಸಗೊಳಿಸಲಾಗಿದೆ.

## ನುಡಿಮುತ್ತು :

**ಪ್ರತಿ ಕೆಟ್ಟ ಘಳಿಗೆಯಲ್ಲಿ ಏನಾದರೂ ಒಳ್ಳೆಯದ್ದು ಇದ್ದೆ ಇರುತ್ತದೆ. ನಿಂತು ಹೋದ ಗಡಿಯಾರವೂ ದಿನದಲ್ಲಿ ಎರಡು ಭಾರಿ ಸರಿಯಾದ ಸಮಯ ತೋರಿಸುತ್ತದೆ. ಆದ್ದರಿಂದ ಯಾವತ್ತೂ ಎಲ್ಲಾದರಲ್ಲೂ ಒಳ್ಳೆಯದನ್ನೇ ಹುಡುಕಬೇಕು..**

**ಬರೆದಿಟ್ಟಂತೆ ಜೀವನ ಮಾಡಲು ಯಾರಿಗೂ ಸಾಧ್ಯವಿಲ್ಲ. ಆದರೆ...**
**ಬರೆದಿಡುವಂಥಹ ಜೀವನ ಮಾಡಲು ಸಾಧ್ಯ ಇದೆ...**


ಸುಭಾಷಿತ : ಬದುಕಿನ ಯಶಸ್ಸಿನ ಸಂತೋಷ ಅರಿವಾಗುವುದು ಕಷ್ಟಗಳನ್ನು ಅನುಭವಿಸಿದ ಮನುಜನಿಗೆ ಮಾತ್ರ – ಅಬ್ದುಲ್ ಕಲಾಂ

## ಮಂಕುತಿಮ್ಮನ ಕಗ್ಗ

**ಪುರುಷಸ್ವತಂತ್ರತೆಯ ಪರಮಸಿದ್ಧಿಯದೇನು ?|**
**ಧರಣಿಗನುದಿನದ ರಕ್ತಾಭಿಷೇಚನೆಯೇ? ||**
**ಕರವಾಲವನು ಪುಷ್ಪಸರವೆಂದು ಸೆಳೆದಾಡೆ |**
**ಪರಿಮಳವ ಸೂಸುವುದೆ ? – ಮಂಕುತಿಮ್ಮ ||**

•ಆಗ ನಡೆಯುತ್ತಿದ್ದ ಯುದ್ದ, ಯುದ್ದದಿಂದ ಆಗುತ್ತಿದ್ದ ದುಷ್ಪರಿಣಾಮಗಳು, ಇವುಗಳ ಬಗ್ಗೆ ಮನಕರಗಿ ಭಾವುಕರಾದ ಮಾನ್ಯ ಗುಂಡಪ್ಪನವರು ಶಕ್ತಿಯ ಸ್ವಾತಂತ್ರದ ಸರ್ವೋಚ್ಚ ಗುರಿ, ಈ ಭೂಮಿಗೆ ಪ್ರತಿದಿನವೂ ರಕ್ತದ ಅಭಿಷೇಕವೇ, ಒರೆಯಿಂದ ಕತ್ತಿಯನ್ನು ಹೂವಿನ ಮಾಲೆ ಎಂದುಎಳೆದರೆ ಅದರಿಂದ ಸುಗಂಧ ಬರಬಹುದೇ ಎನ್ನುತ್ತಾರೆ.

## ಪದ ಹುಡುಕೋಣ – ಆಭರಣಗಳು



| | | | | | | | | | | | |
|---|---|---|---|---|---|---|---|---|---|---|---|
| ಬ | ದು | ಕು | ಜ | ಟ | ಕಾ | ಬಂ | ಡ | ಖ | ಕ | ಓ | ರ |
| ಝು | ಬೈ | ತ | ಲೆ | ಬೊ | ಟ್ಟು | ತ್ರಿ | ವೇ | ಣಿ | ಡ | ಸ | ಮಂ |
| ಬೆಂ | ಗಾ | ಳಿ | ಹು | ಡು | ಗಿ | ಸ | ಜಾ | ಡು | ಗ | ಹು | ಟ್ಟು |
| ಗೆ | ಜ್ಜೆ | ಚಿ | ತಾ | ದಂ | ತ | ರ | ಪು | ಕಾ | ಲ್ಗ | ಡ | ಗ |
| ನೇ | ಹ | ಲ | ನ | ನೀ | ರು | ಪ | ಮೂ | ಗು | ಬೊ | ಟ್ಟು | ಘ |
| ಸಿ | ರಿ | ಯಾ | ಡು | ಹ | ನಿ | ಣಿ | ಕ | ರ್ನಾ | ಟ | ಕ | ದ |
| ಆ | ಣಿ | ಮು | ಪ | ತ್ತು | ಮೂ | ರು | ಹೆ | ಣ್ಣು | ಐ | ದು | ಕಾ |
| ವಂ | ಕಿ | ಜ | ಟ್ಟಿ | ಡೆ | ಜ | ಡೆ | ಬಿ | ಲ್ಲೆ | ಯ | ಶ್ | ಲುಂ |
| ಕೋ | ತಿ | ಮ | ಬ | ಣ್ಣ | ಉಂ | ಗು | ರ | ಕಾ | ಲು | ನೋ | ಗು |
| ಅ | ಬೆಂ | ಣಿ | ಏ | ಲ | ಕ್ಕಿ | ಪಾ | ಯ | ಸ | ಖು | ಜು | ರ |
| ಕ್ಷ | ಡೋ | ಹಾ | ಮೂ | ಸ | ಹಾ | ದ್ರಿ | ಪ | ಬೆಂ | ಕಿ | ಮು | ಟೆ |
| ಆ | ಲೆ | ರ | ಬ | ಓ | ರ | ಊ | ತ | ದ | ಚ್ಚ | ಕಿ | ಟ್ನಿ |
| ಅ | ರ | ಳಿ | ದ | ಳೆ | ಹೂ | ಉ | ತ್ತೀ | ರ್ಣ | ಕ | ಖ | ಓ |
| ಘಂ | ಟ | ಸಾ | ಲ | ಕ | ಎ | ಅ | ಡ್ಡಿ | ಕೆ | ಕ | ಥೆ | ಲೆ |

| | | | |
|---|---|---|---|
| ಸರ | ಬೆಂಡೋಲೆ | ಅಡ್ಡಿಕೆ | ಬಳೆ |
| ಕಾಲ್ಗಡಗ | ಹಾರ | ಸರಪಣಿ | ಉಂಗುರ |
| ಗೆಜ್ಜೆ | ಪದಕ | ಬೈತಲೆಬೊಟ್ಟು | ಓಲೆ |
| ನಡುಪಟ್ಟಿ | ಜುಮುಕಿ | ಕಡಗ | ವಂಕಿ |
| ಜಡೆಬಿಲ್ಲೆ | ಕಾಲುಂಗುರ | ಮೂಗುಬಟ್ಟು | ಮಣಿಹಾರ |

ಕೃಪೆ : ಮಕ್ಕಳ ಕ್ವಿಜ್ ಪುಸ್ತಕ –ಎನ್. ಪ್ರಭಾ

## ಚಿತ್ರ ಶೀರ್ಷಿಕೆ : ರೂಪೇಶ್ ಕುಮಾರ್ ಪುನಿಚತ್ತಾಯ



ಹಸುವಿನ ಕೊರಳಿನ ಗೆಜ್ಜೆಯ ದನಿಯು ನಾನಾಗುವ ಆಸೆ...

## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ



**ಪತ್ರ ೬**

**ಪ್ರೀತಿಯ ಪುಟಾಣಿಗಳೆ,**

ಮಂಜುಸುರಿವ ಒಂದು ಮುಂಜಾವಲ್ಲಿ ಮೈಸೂರಿನ ಮಾನಸಗಂಗೋತ್ರಿಪಕ್ಕದ ದೊಡ್ಡ ಅರಳಿಕಟ್ಟೆಬಳಿ ಮಹಾಮೌನಿ ಮುನಿಯಂತೆ ಬಂದುನಿಂತಿದ್ದರು ಬಿಳಿತಲೆಯ ಬಿಳಿಪೈಜಾಮಜುಬ್ಬಧಾರಿ ನಿವೃತ್ತ ಉಪಕುಲಪತಿಗಳು. ಒಂಟಿಕೊಪ್ಪಲಿನ ಉದಯರವಿ ಎಂಬ ಸ್ವಗೃಹದಲ್ಲಿ ನೆಲೆಸಿದ್ದ ಅವರು ಮಾರ್ನಿಂಗ್‌ವಾಕ್ ನೆಪದಲ್ಲಿ ತಾವೇ ನಿರ್ಮಿಸಿದ್ದ ವಿಶ್ವವಿದ್ಯಾಲಯವನ್ನ ತಾಯ್ಮಮತೆ ಕಣ್ಣಿಂದ ತಬ್ಬಲು ಬಂದಿದ್ದರೇನೊ. ೧೯೭೩ನೆಸಾಲಿನಲ್ಲಿ ಅಂತಿಮವರ್ಷದ ಇಂಗ್ಲಿಷ್ ಎಂ.ಎ. ವಿದ್ಯಾರ್ಥಿಯಾಗಿ ಪಿ.ಜಿ. ಹಾಸ್ಟೆಲಿನಲ್ಲಿದ್ದ ನನ್ನ ಪಾಲಿಗೆ ಅದೊಂದು ಮರೆಯಲಾರದ ಮಹಾದರ್ಶನ. ಈಗಲೂ ಅದರ ಪ್ರಭೆ ಪ್ರಭಾವ ಪ್ರೇರೇಪಣೆಯಲ್ಲೆ ಹೆಜ್ಜೆಹಾಕುತ್ತಿರುವೆ. ಅವರು ಯಾರು ಬಲ್ಲಿರೇನು? ಅವರ 'ಹೆಸರು ಹೇಳಲೇನು? ಅವರೆ ಮಹಾಕವಿ ಕುವೆಂಪು.

ಕುವೆಂಪು ಹುಟ್ಟಿದ್ದು ೧೯೦೪ರ ಡಿಸೆಂಬರ್ ೨೯ರಂದು. ಅವರ ತಾಯೂರು ಹಿರೇಕೊಡಿಗೆ(ಚಿಕ್ಕಮಗಳೂರು ಜಿಲ್ಲೆ)ಯಲ್ಲಿ. ಬಾಲ್ಯಕಾಲ ಕಳೆದದ್ದು ತಂದೆಯೂರು ಕುಪ್ಪಳಿ(ಶಿವಮೊಗ್ಗ ಜಿಲ್ಲೆ)ಯಲ್ಲಿ. ಹೆಚ್ಚಿನ ಸಾಹಿತ್ಯರಚಿಸಿದ್ದು, ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಮಾನಸಗಂಗೋತ್ರಿ ನಿರ್ಮಿಸಿದ್ದು ಮೈಸೂರಿನಲ್ಲಿ. ಅವರ 'ರಾಮಾಯಣ ದರ್ಶನಂ' ಮಹಾಕಾವ್ಯ, ಮಲೆನಾಡಿನ ರಾಮಾಯಣ ಮಹಾಭಾರತ ಎನ್ನಬಹುದಾದ ಮೇರುಕಾದಂಬರಿಜೋಡಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಜೊತೆಗೆ ಅನೇಕ ಕವನಸಂಕಲನಗಳು, ಕಥಾಸಂಕಲನಗಳು, ನಾಟಕಗಳು, ವಿಮರ್ಶಾಸಂಕಲನಗಳು, ಲಲಿತ 'ಪ್ರಬಂಧ ಗಳು, 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಕಥೆ ಏನೇನೆಲ್ಲರಚಿಸಿ ನಮ್ಮ ದೇಶದ ಅತ್ಯುನ್ನತ ಪ್ರಶಸ್ತಿಯಾದ ಭಾರತೀಯ ಜ್ಞಾನಪೀಠಕ್ಕೆ ಭಾಜರಾಗಿದ್ದಾರೆ ಗೊತ್ತೆ? ಕನ್ನಡ ಸಾಹಿತ್ಯಕ್ಷೇತ್ರದ ಸಕಲ ಕಲಾವಲ್ಲಭನ್ ಎಂದೇ ಖ್ಯಾತರಾದ ನಮ್ಮ ಕುವೆಂಪು (ಕುಪ್ಪಳಿ ವೆಂಕಟಪ್ಪನವರ ಮಗ ಪುಟ್ಟಪ್ಪ) ಮಕ್ಕಳಿಗಾಗಿಯೆ ಅನೇಕ ಪುಟ್ಟಪುಟ್ಟ ಪುಸ್ತಕಗಳನ್ನೂ ಬರೆದಿದ್ದಾರೆಂಬುದು ಅಷ್ಟಾಗಿ ಪ್ರಚಾರಗೊಂಡಿಲ್ಲ. ಶಿಶುಸಾಹಿತ್ಯ ರಚಿಸುವ ಸಾಹಿತಿಗಳೆ ಪ್ರತ್ಯೇಕವಾಗಿರುತ್ತಾರೆ ಎಂಬುದು ಸುಳ್ಳು; ಇರಬೇಕೆಂಬುದು ತಪ್ಪು. ಆಧುನಿಕ ಕನ್ನಡಸಾಹಿತ್ಯದ ದಿಗ್ಗಜರಾದ ಕುವೆಂಪುರವರ 'ಕಿಂದರಿಜೋಗಿ', ಬೇಂದ್ರೆಯವರ 'ಪಾತರಗಿತ್ತಿ', ಕಾರಂತರ 'ಓದುವ ಆಟ' ಇವೆಲ್ಲ ಸದಾಕಾಲದಲ್ಲೂ ಮಕ್ಕಳಿಗೆ ಸುಲಭವಾಗಿ ಸಲ್ಲುವ, ಅವರ ಕಲ್ಪನಾಮಾಯೆಗೆ ಸಹಜವಾಗಿಯೆ ದಕ್ಕುವ ಅಪರೂಪದ ರಚನೆಗಳು\ ಸಂಕಲನಗಳು. ಕುವೆಂಪುರವರ ಶಿಶುಸಾಹಿತ್ಯವೂ ಸಾಕಷ್ಟು ವಿಪುಲವಾಗಿದೆ. ಗುಬ್ಬಕ್ಕನ ಮೂರುಮರಿಗಳನ್ನು ನುಂಗಿದ್ದ ನರಿಯ ಬೆನ್ನಿಗ 'ಗುದ್ದಿದ ಕರಡ್ಯಣ್ಣ ಅದರ ಬಾಯಿಂದ ಮರಿಗಳ ಹೊರಹಾರಿಸಿದಾಗ ಹುಲಿಯಣ್ಣ ನರಿಯ ಕೋಡುಗಳ ಮುರಿದುಹಾಕಿ 'ನರಿಗಳಿಗೇಕೆ ಕೋಡಿಲ್ಲ?' ಎಂಬ ಪ್ರಶ್ನೆಗೆ ಉತ್ತರವಿಕ್ಕುವ ಕತೆ ಬಹಳ ಸೊಗಸಾಗಿದೆ. 'ಅಮಲನ ಕಥೆ' ಹೆದರಿದ ಹರಿಣವನ್ನು ರಕ್ಷಿಸಲು ಕ್ರೂರಿಬೇಡನನ್ನು ಎದುರು ಹಾಕಿಕೊಂಡು ಹೋರಾಡಿದ ಅಮಲನಿಗೆ ಶ್ರೀಹರಿ ಸಕಲೈಶ್ವರ್ಯಕೊಟ್ಟು ಸಲಹಿದ ೧೯೦ಪದ್ಯಗಳ ಭಕ್ತಿಪ್ರಧಾನ ಕಥನಕವನ. 'ನನ್ನ ಮನೆ', 'ಮರಿವಿಜ್ಞಾನಿ' ಮತ್ತು 'ಮೇಘಪುರ'ಎಂಬ ಮಕ್ಕಳಪದ್ಯ ಸಂಕಲನಗಳು 'ಶಿಶು ಗೀತಾಂಜಲಿ' ಎಂಬ ಶೀರ್ಷಿಕೆಯಡಿ ಮರುಮುದ್ರಣ ಗೊಂಡಿವೆ. "ದೇವರ ಪೆಪ್ಪರಮೆಂಟೇನಮ್ಮಾ\ ಗಗನದೊಳಲೆಯುವ ಚಂದಿರನು?" ಎಂದು ಮುಗ್ಧ ಮಗುಭಾಷೆಯಲ್ಲಿ ಕೇಳುವ 'ಅರ್ಧ ಚಂದ್ರ' ಪದ್ಯ ಪೆಪ್ಪರಮೆಂಟಿನಷ್ಟೇ ಸಿಹಿಯಾಗಿದೆ.



## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

"ನಾ ನಿನಗೊಡವೆಯು; ನೀ ನನಗೊಡವೆಯು;\ ಬೇರೆಯ ಒಡವೆಗಳೇಕಮ್ಮಾ?" ಎಂಬ ಸಾಲುಗಳು ತಾಯಿ–ಮಗು ಮಮತೆಗೆ, ಬಿಡಿಸಲಾರದ ಬಾಂಧವ್ಯಕ್ಕೆ ಬಣ್ಣಹಚ್ಚುತ್ತವೆ. "ಕನ್ನಡ ಎನೆ ಕುಣಿದಾಡುವುದೆನ್ನೆದೆ,\ ಕನ್ನಡ ಎನೆ ಕಿವಿ ನಿಮಿರುವುದು" ಎಂಬಸಾಲುಗಳು ಮಕ್ಕಳೆದೆಯಲ್ಲಿ ಕನ್ನಡಾಭಿಮಾನದ ಬೀಜಬಿತ್ತುತ್ತವೆ. "ಕಾಮನಬಿಲ್ಲು ಕಮಾನುಕಟ್ಟಿದೆ\ ಮೋಡದ ನಾಡಿನ ಬಾಗಿಲಿಗೆ" ಎಂಬ ಸಾಲುಗಳು ಮಕ್ಕಳ ಕನಸಿಗೆ ಕನ್ನಹಾಕುತ್ತವೆ. ದೇವರ ಲೋಕದ ಬಾಲಕರಾಡುವ ಉಕ್ಕಿನ ಚೆಂಡಿನಾಟದ ಪರಿಣಾಮವೆ ಗುಡುಗು ಮಿಂಚು ಮಳೆಯೆಂಬ ಮರಿವಿಜ್ಞಾನಿ ಮೂರ್ತಿಯ ಮಾತುಗಳು ಅಚ್ಚರಿಮೂಡಿಸುತ್ತವೆ. 'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯಂತು ೧೯.೧೧.೧೯೨೬ರಂದು ನಾಲ್ಕೇಗಂಟೆಯ ಅವಧಿಯಲ್ಲಿ ರಚಿತವಾದ ೪೨೮ಸಾಲುಗಳ ವಿಚಿತ್ರಲಯವಂತಿಕೆ ಹಾಗು ಲವಲವಿಕೆಯ ಕಥನ 'ಕವನ. ವೆಸ್ಲಿಯನ್ ಮಿಷನ್‌ಹೈಸ್ಕೂಲ್ ವಿದ್ಯಾರ್ಥಿಯಾಗಿ ಐದನೆಫಾರಂನ ಪಠ್ಯಪುಸ್ತಕದಲ್ಲಿ ಓದಿದ್ದ ಇಂಗ್ಲಿಷ್‌ಕವಿ ರಾಬರ್ಟ್ ಬ್ರೌನಿಂಗ್‌ನ 'ಪೈಡ್ ಪೈಪರ್ ಆಫ್ ಹ್ಯಾಮಿಲಿನ್' (ಜರ್ಮನ್ ಜಾನಪದ ಕಥೆ ಪ್ರೇರಿತ)ಎಂಬ ಕಥನಕವಿತೆಯ ನೆನಪಿನಾಧಾರದಮೇಲೆ ಕುವೆಂಪು ರಚಿಸಿದ ಈ ಕನ್ನಡಕವಿತೆ ಬೇಂದ್ರೆಯವರು ಕನ್ನಡಕ್ಕೆ ತಂದ ಕಾಳಿದಾಸನ ಸಂಸ್ಕೃತ ಖಂಡಕಾವ್ಯ 'ಮೇಘದೂತ'ದಷ್ಟೆ ಸ್ವತಂತ್ರ ಛಾಪಿನ ಕನ್ನಡಕವಿತೆಯಾಗಿ ಕನ್ನಡಿಗರ ಮನೆಮನಗಳ ಬೆಳಗುತ್ತಬಂದಿದೆ. ಇಲಿಕಾಟದಿಂದ ತತ್ತರಿಸಿಹೋದ ಬೊಮ್ಮನಹಳ್ಳಿಗೆ ಬಂದ ಜೋಗಿ ಕಿಂದರಿಬಾರಿಸಿ ಅವನ್ನೆಲ್ಲ ತುಂಗಾನದಿಯಲ್ಲಿ ಮುಳುಗಿಸಿದಾಗ ಘೋಷಿತಬಹುಮಾನ ನೀಡದ ಮುಟ್ಠಾಳಗೌಡನಿಂದಾಗಿ ಹಳ್ಳಿಮಕ್ಕಳೆಲ್ಲ ಕಿಂದರಿನಾದಕ್ಕೆ ಮರುಳಾಗಿ ಹೋಗಿ ಗುಡ್ಡದ ಗವಿಬಾಯಲ್ಲಿ ಮಾಯವಾಗುವ ಮಾರ್ಮಿಕ ಕಥೆ ಇಲ್ಲಿನದು. ಈ ಹಾಡುಗಬ್ಬದ ಮುಂಬರಹ "ಹಾಡಲಿ ಕುಣಿಯಲಿ; ಹಾರಲಿ, ಏರಲಿ\ ದಿವಿಜತ್ವಕೆ ಈ ಮನುಜಪಶು"ಎಂಬ ವಿಸ್ತೃತ ಹಾರೈಕೆಹೊತ್ತು ಇದು ಬರಿ ಮಕ್ಕಳಿಗೆಮೀಸಲಾದ ಕವಿತೆಯಲ್ಲ ಎಂದು ಸೂಚಿಸುತ್ತದೆ. ೧೯೫೦ರ ದಶಕದ ನಮ್ಮಬಾಲ್ಯದ ಶಾಲೆಯಲ್ಲಿ ಈ ಸುದೀರ್ಘಕವಿತೆಯ ಸಂಗ್ರಹ ರೂಪವನ್ನು ಆಕರ್ಷಕ ಚಿತ್ರಗಳಸಮೇತ ಸವಿದ ಸವಿನೆನಪು ಇನ್ನೂ ಹಸಿಹಸಿ ಹಸಿರಾಗಿದೆ. "ಭೃಂಗಾಮಲಕದ ತೈಲವ ಹಚ್ಚಿದ\ ಶೇಷಕ್ಕನ ನುಣ್ಣನೆ ಫಣಿವೇಣಿ\...\ಇಲಿಗಳಿಗಾಗಿತ್ತೂಟದ ಫೇಣಿ" ಹಾಗು "ಸಿದ್ದೋಜೈಗಳು ...ಪಾಠವ ಬೋಧಿಸುತಿದ್ದಾಗ\ ಅಂಗಿಯ ಜೇಬಿಂ ಹೆಳವಿಲಿ ಯೊಂದು\ ಚಂಗನೆ ನೆಗೆಯಿತು ತೂತನುಮಾಡಿ" ಎಂಬಸಾಲುಗಳ ಹಾಡಿದ್ದೇಹಾಡಿ ನಕ್ಕಿದ್ದೇನಕ್ಕು ಕುಣಿದಾಡಿದ್ದುಂಟು. ಮನಸ್ಸಿಗೆ ಭಾರೀಮಜಾಕೊಡುವ ಈ ಹಾಸ್ಯಭರಿತ ನೀಳ್ಗವಿತೆ ನೀವೆಲ್ಲ ತಪ್ಪದೇ ಓದುತ್ತೀರೆಂದು ಕಾಯುತ್ತಿದೆ. ಮರೆಯದಿರಿ, ಮರೆತು ನಿರಾಶ ರಾಗದಿರಿ. ಊರು ಹೇಗಿರಬಾರದೆಂದು ತಿಳಿಸಿಹೇಳುವ 'ಹಾಳೂರು' ಮತ್ತೊಂದು ರೂಪಾಂತರಿತ ಕವಿತೆ. ಮಕ್ಕಳನಾಟಕ 'ಮೋಡಣ್ಣನ ತಮ್ಮ' ಭೂವಾಸಿ–ಆಕಾಶವಾಸಿ ಗೆಳೆತನ ಬಿಚ್ಚಿಟ್ಟರೆ, 'ನನ್ನ ಗೋಪಾಲ' ದನಕಾಯುವ ಬಡಹುಡುಗನಿಗೆ ಒಲಿದುಬಂದ ಬಾಲಕೃಷ್ಣನ ಪವಾಡ ಬಣ್ಣಿಸುತ್ತದೆ.

ಇಂಥ ಅಗಾಧ ಸಾಹಿತ್ಯಸಂಪತ್ತನ್ನು ಕನ್ನಡಕ್ಕೆಕೊಟ್ಟ ಮಹಾನ್‌ಕವಿ ಕುವೆಂಪು '೧೯೯೪ರ ನವೆಂಬರ್ ೧೧ರಂದು ನಮ್ಮನ್ನಗಲಿ ಹೋದರು. "ಯುಗದ ಕವಿಗೆ\ ಜಗದ ಕವಿಗೆ\ ಶ್ರೀ ರಾಮಾಯಣ\ ದರ್ಶನದಿಂದಲೇ ಕೈ\ ಮುಗಿದ ಕವಿಗೆ–\ ಮಣಿಯದವರು ಯಾರು?"ಎಂದು ಕುವೆಂಪುಬಗ್ಗೆ ಮಾರ್ಮಿಕ ಮೆಚ್ಚುಗೆ ಗೌರವ ವ್ಯಕ್ತಪಡಿಸಿದವರು ಯಾರು ಗೊತ್ತೆ? ಮತ್ತೊಬ್ಬ ಜ್ಞಾನಪೀಠಪ್ರಶಸ್ತಿ ವಿಜೇತರೇ ಆದ ವರಕವಿ ಬೇಂದ್ರೆ.

ಶಾರ್ಲೆಟ್ ಸಿಟಿ ಸೇರಿದಂತೆ ಅಮೆರಿಕೆಯಲ್ಲಿ ಎಲ್ಲೆಡೆ ಕ್ರಿಸ್ಮಸ್ ಸಡಗರವಲ್ಲವೆ ಈಗ?

ಎಲ್ಲರಿಗೂ ಕ್ರಿಸ್ತನ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**ನಿಮ್ಮ ಮೂರ್ತಿ ತಾತ**



ಸಂಚಿಕೆ ೧೨
ಡಿಸೆಂಬರ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್
rajanisomayaji@gmail.com